# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA





ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲುQR ಕೋಡ್ ಸ್ಕ್ಯಾನ್ ಮಾಡಿ ಓದಿರಿ

No.1 Leading in Local News Paper

80,000

HAMPI TIMES E-PAPER READERS

94486 33038

NEWS PAPER ADD - THE BEST ADVERTISING PLATFORM TO BOOST YOUR BUSINESS

E-mail: hampitimes@gmail.com | # Valmiki Circle hospet-583201



ಸಂಪುಟ:02 Volume:02 • ಸಂಚಿಕೆ: 35 Issue: 35 • ಆರ್.ಎನ್.ಐ. ನಂ.:KARKAN/2023/88055 RNI No:KARKAN/2023/88055 • ವಿಜಯನಗರ VIJAYANAGARA • 31.07.2024 31.07.2024 • ಬುಧವಾರ Wednesday • ಪುಟ:04 Page:04 • ಬೆಲೆ:2 Rs:2



ಹಂಪಿ ಟೈಮ್ಸ್ ಮಾರ್ಗದರ್ಶಿ
ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com


**SSLC**

**ಈ ಭಾರಿ ಫಲಿತಾಂಶ ನಮ್ಮದೆ**

ದಿನಕ್ಕೊಂದು ವಿಷಯ ಪ್ರಶ್ನೋತ್ತರ ಸರಣಿ ಹೈಸ್ಕೋರ್ ಗಳಿಸಲು ನಿತ್ಯ ಬರೆದಿಟ್ಟುಕೊಂಡು ಓದಿ

ಪುಟ. 4ರಲ್ಲಿ

**ನಿನ್ನ ಏಳಿಗೆಗೆ ನೀನೇ ಶಿಲ್ಪಿ**

ನಿಮ್ಮ ಅಭಿಪ್ರಾಯಗಳನ್ನು ಇ-ಮೇಲ್ ಮಾಡಿ
ಹಂಪಿ ಟೈಮ್ಸ್ ಬಳಗ
ವಿಜಯನಗರ
E-mail: hampitimes@gmail.com

# ಮಹಿಳೆಯರು ಮಕ್ಕಳು ಎಚ್ಚರದಿಂದಿರಿ ಕಳ್ಳಸಾಗಣಿಕೆಗೆ ಬೇಕಿದೆ ಕಡಿವಾಣ

## ಹಿರಿಯ ಸಿವಿಲ್ ನ್ಯಾಯಾಧೀಶ ಜೆ. ಯೋಗೇಶ್ ಸಲಹೆ | ಮಕ್ಕಳತ್ತ ಗಮನಹರಿಸಿ



■ ಹಂಪಿ ಟೈಮ್ಸ್ ಕೂಡ್ಲಿಗಿ

ಸಮಾಜದಲ್ಲಿ ಪ್ರಸ್ತುತ ಮಾನವ ಕಳ್ಳ ಸಾಗಾಣಿಕೆಯು ಬಹುದೊಡ್ಡ ಸಮಸ್ಯೆಯಾಗಿ ಬೆಳೆದಿದ್ದು, ಅದರಲ್ಲೂ ಮಾನವ ಕಳ್ಳ ಸಾಗಾಣಿಕೆಗೆ ಹೆಚ್ಚಾಗಿ ಬಲಿಯಾಗುತ್ತಿರುವವರು ಹೆಂಗಸರು ಮತ್ತು ಮಕ್ಕಳು ಇದರಿಂದ ಎಲ್ಲರೂ ಎಚ್ಚೆತ್ತುಕೊಳ್ಳಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ಜೆ. ಯೋಗೇಶ್ ತಿಳಿಸಿದರು. ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ಮಂಗಳವಾರ ತಾಲೂಕು ಕಾನೂನು ಸೇವೆಗಳ ಸಮಿತಿ, ತಾಲೂಕು ವಕೀಲರ ಸಂಘ, ಸಿಡಿಪಿಒ ಕಚೇರಿ ಹಾಗೂ ಪಪಂ ಕಚೇರಿ ವತಿಯಿಂದ ಏರ್ಪಡಿಸಿದ್ದ ಮಾನವ ಕಳ್ಳ ಸಾಗಣೆ ತಡೆ ದಿನ ಅಂಗವಾಗಿ ಸಾರ್ವಜನಿಕರಿಗೆ ಕಾನೂನು ಅರಿವು, ನೆರವು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಬಡತನದಲ್ಲಿರುವ ಹೆಣ್ಣು ಮಕ್ಕಳಿಗೆ ಹಣದ ಸಹಾಯ ಅಗತ್ಯವಿರುತ್ತದೆ. ಹೆಂಗಸರು ಆಮಿಷಗಳಿಗೆ ಬಲಿಯಾಗಿ ಮೋಸ ಹೋಗುವುದನ್ನು ತಡೆಯಬೇಕು. ಮಕ್ಕಳನ್ನು ಪೋಷಕರು ತುಂಬಾ ಜಾಗ್ರತೆಯಿಂದ ಬೆಳೆಸಬೇಕು. ಮಕ್ಕಳಿಗೆ ಯಾವುದು ಸರಿ ಯಾವುದು ತಪ್ಪು ಎಂಬ ವಿಚಾರಗಳನ್ನು ತಿಳಿಸಿಕೊಡಬೇಕು ಎಂದರು. ನಮ್ಮ ಸುತ್ತಮುತ್ತ ನಡೆಯುತ್ತಿರುವ ವಿದ್ಯಮಾನಗಳನ್ನು ಗಮನಿಸುತ್ತಿರಬೇಕು. ಮಾನವ ಕಳ್ಳ ಸಾಗಾಣಿಕೆಯ ಕಾಯ್ದೆ ಕಾನೂನುಗಳ ಬಗ್ಗೆ ಎಲ್ಲರಲ್ಲಿ ಅರಿವು ಮೂಡಿಸಬೇಕು. ದುಡ್ಡಿನ ಆಮಿಷ ಒಡ್ಡಿ ಹೆಣ್ಣು ಮಕ್ಕಳನ್ನು ಮದುವೆ ಮಾಡಿಕೊಂಡು ಮೋಸ ಮಾಡುವ ಸಂಭವಗಳಿರುತ್ತವೆ. ಬಡತನದಲ್ಲಿರುವವರು ಮತ್ತು ಅವಿದ್ಯಾವಂತರು ಇಂತಹ ಆಮಿಷಗಳಿಗೆ ಹೆಚ್ಚು ಬಲಿಯಾಗುತ್ತಿದ್ದಾರೆ. ಮಹಿಳೆಯರು ಎಚ್ಚೆತ್ತುಕೊಳ್ಳಬೇಕು ಎಂದರು. ಇದೇ ಸಂಧರ್ಭದಲ್ಲಿ ಮಾನವ ಕಳ್ಳ ಸಾಗಣೆ ತಡೆ ಕುರಿತು ಪ್ಯಾನಲ್ ವಕೀಲ ವಿರುಪಾಕ್ಷಪ್ಪ ಮಾತನಾಡಿದರು. ನಂತರ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಮಾನವ ಕಳ್ಳ ಸಾಗಣೆ ತಡೆ ಕುರಿತು ಜಾಗೃತಿ ಜಾಥ ನಡೆಯಿತು. ಸಹಾಯಕ ಸರ್ಕಾರಿ ಅಭಿಯೋಜಕಿ ವೈ.ಶಿಲ್ಪಾ, ವಕೀಲರ ಸಂಘದ ತಾಲೂಕು ಅಧ್ಯಕ್ಷ ಜಿ.ಎಂ. ಮಲ್ಲಿಕಾರ್ಜುನ, ಉಪಾಧ್ಯಕ್ಷ ವೆಂಕಟೇಶ್, ಅಪರ ಸರ್ಕಾರಿ ವಕೀಲ ಕೆ.ಜಿ.ಶಿವಪ್ರಸಾದ್, ಕೆ.ಎಚ್. ಎಂ.ಶೈಲಜಾ, ಪಪಂ ಆರೋಗ್ಯ ನಿರೀಕ್ಷಕಿ ಗೀತಾ, ರಾಘವೇಂದ್ರ, ಕೆ.ರಾಧ ಇತರರು ಇದ್ದರು.

# ಕರಾಟೆ ಚಾಂಪಿಯನ್‌ಗಳಾದ ಹ.ಬೊ.ಹಳ್ಳಿ ವಿದ್ಯಾರ್ಥಿಗಳು



■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ

ದಾವಣಗೆರೆ ನಗರದಲ್ಲಿ ಇತ್ತೀಚಿಗೆ ನಡೆದ ರಾಷ್ಟ್ರಮಟ್ಟದ ಕರಾಟೆ ಪ್ರಥಮ ಪಂದ್ಯಾವಳಿಯಲ್ಲಿ, ಪಟ್ಟಣದ ಟ್ರೆಡಿಶನಲ್ ಶೋಟೋಕಾನ್ ಕರಾಟೆ ಅಕಾಡೆಮಿಯ ಕರ್ನಾಟಕ ಸಂಸ್ಥೆಯ ವಿದ್ಯಾರ್ಥಿಗಳು ಉತ್ತಮ ಪ್ರದರ್ಶನ ನೀಡುವ ಮೂಲಕ ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಕರ್ನಾಟಕ ಸ್ಪೋರ್ಟ್ಸ್ ಕರಾಟೆ ಅಸೋಷಿಯನ್ ದಾವಣಗೆರೆಯವರ ನೇತೃತ್ವದಲ್ಲಿ ಏರ್ಪಡಿಸಿದ್ದ, ಈ ಸ್ಪರ್ಧೆ 2024ರ ಕರಾಟೆ ಚಾಂಪಿಯನ್ ನಲ್ಲಿ, ಹಳೇ ಊರಿನ ಪಕ್ಕೀರಪ್ಪ ವರಕನಹಳ್ಳಿ ಇವರ ತರಬೇತಿಯಲ್ಲಿನ ವಿದ್ಯಾರ್ಥಿಗಳು ಪ್ರಶಸ್ತಿಗಳನ್ನು ಪಡೆದರು.

**ಬಾಲಕಿಯರ ವಿಭಾಗದಲ್ಲಿ :** 8 ವರ್ಷದ ಸಿಂಧುಶ್ರೀ ವರಕನಹಳ್ಳಿ ಕಟಾದಲ್ಲಿ ಪ್ರಥಮ, 10 ವರ್ಷದ ಸ್ವಪ್ನ ಬಾವಿಕಟ್ಟಿ (ಬ್ಲಾಕ್‌ಬೆಲ್ಟ್) ಕಟಾದಲ್ಲಿ ಪ್ರಥಮ, ಕುಮಿಟೆಯಲ್ಲಿ ದ್ವಿತೀಯ, 11 ವರ್ಷದ ಆರುಷಿ ಕಟಾದಲ್ಲಿ ಪ್ರಥಮ, ಕುಮಿಟೆಯಲ್ಲಿ ತೃತೀಯ ಸ್ಥಾನದಲ್ಲಿ ವಿಜೇತರಾಗಿದ್ದಾರೆ.

**ಬಾಲಕರ ವಿಭಾಗದಲ್ಲಿ:** 7 ವರ್ಷದ ಎಂ.ತೇಜು ಕಟಾ ಮತ್ತು ಕುಮಿಟೆಯಲ್ಲಿ ದ್ವಿತೀಯ, ಎಚ್.ಹರ್ಷ ದ್ವಿತೀಯ, ನಿಶ್ಚಿತ ಹಾಗೂ ಎಂ.ಪ್ರಜ್ವಲ್ ಕಟಾದಲ್ಲಿ ತಲಾ ಪ್ರಥಮ, 20 ವರ್ಷದ ಮೇಲ್ಪಟ್ಟ ಬ್ಲಾಕ್‌ಬೆಲ್ಟ್‌ನಲ್ಲಿ ನವೀನ್ ಕುಮಾರ್ ಕಟಾ ಮತ್ತು ಕುಮಿಟೆಯಲ್ಲಿ ಎದುರಾಳಿಗಳನ್ನು ಮಣಿಸುವ ಮೂಲಕ ಪ್ರಥಮ ಸ್ಥಾನದಲ್ಲಿ ವಿಜೇತರಾಗಿದ್ದಾರೆ.

ವಿಜೇತರಾದ ವಿದ್ಯಾರ್ಥಿಗಳಿಗೆ ಸಂಸ್ಥೆಯ ಮುಖ್ಯಸ್ಥರಾದ ಬಳ್ಳಾರಿಯ ಕಟ್ಟೆಸ್ವಾಮಿ, ಹ.ಬೊ.ಹಳ್ಳಿ ತಾಲೂಕಿನ ಸುಭಾಷ್ ಮುತ್ತೂರು, ಪಾಲಕರಾದ ಶಿಕ್ಷಕ ಪ್ರಾಶಂತ್ ಹರ್ಷವ್ಯಕ್ತಪಡಿಸಿದ್ದಾರೆ.

ತರಬೇತುದಾರ ಪಕ್ಕೀರಪ್ಪ ವರಕನಹಳ್ಳಿ ವಿದ್ಯಾರ್ಥಿಗಳನ್ನು ಕುರಿತು, ಅವಕಾಶಗಳು ಬರುತ್ತವೆ, ಅವುಗಳನ್ನು ಸದ್ಬಳಕೆಮಾಡಿಕೊಳ್ಳುವ ಮೂಲಕ, ಯಾವುದೇ, ಎಲ್ಲೇ ಸ್ಪರ್ಧೆಗಳಾಗಲಿ ಎದೆಗುಂದದೆ ಸ್ಪರ್ಧೆಗಳಲ್ಲಿ ಭಾಗವಹಿಸಿವುದು ಮುಖ್ಯ ಎಂದರು.

**ಮೈಕ್ರೋ ನ್ಯೂಸ್**

## ಮಕ್ಕಳ ಪುಸ್ತಕ ಚಂದಿರ ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

ಹಂಪಿ ಟೈಮ್ಸ್ ಬಳ್ಳಾರಿ

ಕರ್ನಾಟಕ ಬಾಲವಿಕಾಸ ಅಕಾಡೆಮಿಯು 2023 ನೇ ಸಾಲಿನಲ್ಲಿ ಮಕ್ಕಳ ಕ್ಷೇತ್ರದಲ್ಲಿ ರಚಿಸಲ್ಪಟ್ಟ ಆಯ್ದ ಉತ್ತಮ ಪುಸ್ತಕಗಳಿಗೆ "ಮಕ್ಕಳ ಪುಸ್ತಕ ಚಂದಿರ ಪ್ರಶಸ್ತಿ"ಯನ್ನು ನೀಡಲು ಉದ್ದೇಶಿಸಲಾಗಿದ್ದು, ಆಯ್ದ ಪುಸ್ತಕಗಳಿಂದ ಅರ್ಜಿ ಸಲ್ಲಿಸಬಹುದು.

ಪುಸ್ತಕಗಳು ಆಯಾ ಸಾಲಿನ ಅವಧಿಯಲ್ಲಿ (ಜನವರಿಯಿಂದ ಡಿಸೆಂಬರ್ ತಿಂಗಳ ಅಂತ್ಯದ ಅವಧಿಯಲ್ಲಿ) ಪ್ರಕಟಗೊಂಡ ಸ್ವರಚಿತ ಕವನ ಸಂಕಲನ, ಕಥಾ ಸಂಕಲನ, ನಾಟಕ, ಮಕ್ಕಳ ಕಾದಂಬರಿ (ಪಠ್ಯಾಧಾರಿತ ಬಿಟ್ಟು), ವೈಜ್ಞಾನಿಕ ಲೇಖನಗಳ ಸಂಕಲನ, ಅನುವಾದಿತ ಕೃತಿ (ಯಾವುದೇ ಪ್ರಕಾರದ ಮಕ್ಕಳ ಸಾಹಿತ್ಯ) ಮಕ್ಕಳ ಸಾಹಿತ್ಯ ವಿಮರ್ಶ ಕೃತಿ ಸೇರಿ ಏಳು ಪ್ರಕಾರದ ಮಕ್ಕಳ ಸಾಹಿತ್ಯದ ಕೃತಿಗಳನ್ನು ಪ್ರಶಸ್ತಿಗಾಗಿ ಆಹ್ವಾನಿಸಲಾಗಿದೆ.

ಪ್ರಶಸ್ತಿಗಾಗಿ ಮಾನದಂಡಗಳನ್ನು ಕಚೇರಿಯ ವೆಬ್‌ಸೈಟ್ ಲಿಂಕ್ http://balavikasaacademy.karnataka.gov.in/ ಗೆ ಭೇಟಿ ನೀಡಿ ವೀಕ್ಷಿಸಬಹುದು. ಹೆಚ್ಚಿನ ಮಾಹಿತಿಗಾಗಿ ಧಾರವಾಡದ ಲಕ್ಕಮ್ಮನಹಳ್ಳಿಯ ಕೆಹೆಚ್‌ಬಿ ಕಾಲೋನಿಯ ಚಂದ್ರಕಾ ಲೇಔಟ್ ಹಿಂಭಾಗದ ಕರ್ನಾಟಕ ಬಾಲವಿಕಾಸ ಅಕಾಡೆಮಿಯ ಯೋಜನಾಧಿಕಾರಿಗಳ ಕಚೇರಿ ಅಥವಾ ದೂ.0836-2461666 ಗೆ ಸಂಪರ್ಕಿಸಬಹುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ವಿಜಯ್‌ಕುಮಾರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಟಿ.ಬಿ.ಡ್ಯಾಂ ಹೊರಹರಿವು ಕ್ರಮೇಣ ಹೆಚ್ಚಳ ನದಿಯತ್ತಿರ ಸುಳಿದಾಡಬೇಡಿ: ಡಿಸಿ ಅತುಲ್

■ ಹಂಪಿ ಟೈಮ್ಸ್ ಕೊಪ್ಪಳ

ತುಂಗಭದ್ರಾ ನದಿಯ ಮೇಲ್ಮಟ್ಟದಲ್ಲಿರುವ ಭದ್ರಾ, ತುಂಗಾ ಮತ್ತು ವರದಾ ನದಿಯಿಂದ ನೀರು ವ್ಯಾಪಕವಾಗಿ ಹರಿದು ಬರುತ್ತಿರುವುದರಿಂದ ತುಂಗಭದ್ರಾ ನದಿಯಿಂದ ಹೊರ ಹರಿವು ಪ್ರಮಾಣವನ್ನು ಕ್ರಮೇಣ ಜುಲೈ 30ರ ರಾತ್ರಿ 10 ಗಂಟೆ ಸುಮಾರಿಗೆ ಸುಮಾರು 1 ಲಕ್ಷ ಕ್ಯೂಸೆಕ್‌ಗಳಿಗೆ ಹೆಚ್ಚಿಸುತ್ತಿರುವುದರಿಂದಾಗಿ ಜಿಲ್ಲಾಧಿಕಾರಿ ನಲೀನ್ ಅತುಲ್ ಮಂಗಳವಾರ ತುಂಗಭದ್ರಾ ಆಣೆಕಟ್ಟಿನ ಕೆಳಭಾಗದಲ್ಲಿನ ನಾನಾ ಹಳ್ಳಿಗಳಿಗೆ ತೆರಳಿ ಮುಂಜಾಗ್ರತೆ ವಹಿಸಲು ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಮೊದಲಿಗೆ ಮುನಿರಾಬಾದ್ ಹತ್ತಿರದ ಹೊಳೆಮುದಲಾಪುರ ಗ್ರಾಮಕ್ಕೆ ಭೇಟಿ ನೀಡಿದರು. ಗ್ರಾಮದ ಬಳಿಯಲ್ಲಿ ನದಿಯಲ್ಲಿ ರಭಸದಿಂದ





ಹರಿಯುತ್ತಿದ್ದ ನೀರಿನ ವೀಕ್ಷಣೆ ನಡೆಸಿದರು. ಇದೆ ವೇಳೆ ಸಂಬಂಧಿಸಿದ ಅಧಿಕಾರಿಗಳೊಂದಿಗೆ ದೂರವಾಣಿ ಮೂಲಕ ಮಾತನಾಡಿ, ಡ್ಯಾಮ್‌ನಲ್ಲಿ ಲಭ್ಯವಿರುವ ನೀರಿನ ಪ್ರಮಾಣ, ಕ್ಷಣಕ್ಷಣಕ್ಕೆ ಹೆಚ್ಚುತ್ತಿರುವ ನೀರಿನ ಒಳಹರಿನ ಪ್ರಮಾಣ, ಹೊರಹರಿವಿನ ಪ್ರಮಾಣದಲ್ಲಿನ ವ್ಯಾತ್ಯಾಸಗಳ ಬಗ್ಗೆ ಮಾಹಿತಿ ಪಡೆದುಕೊಂಡರು.

ಬಳಿಕ ಗ್ರಾಮದ ಜನರಿಗೆ ನದಿ ತೀರದ ಪ್ರದೇಶಕ್ಕೆ ತೆರಳದಂತೆ ಮುಂಜಾಗ್ರತ ವಹಿಸಬೇಕು ಎಂದು ಸೂಚನೆ ನೀಡಿದರು. ತುಂಗಭದ್ರಾ ನದಿಯಿಂದ ಹೊರ ಹರಿವು ಪ್ರಮಾಣವನ್ನು ಕ್ರಮೇಣ ಸುಮಾರು 1 ಲಕ್ಷ ಕ್ಯೂಸೆಕ್‌ಗಳಿಗೆ ಹೆಚ್ಚಿಸುತ್ತಿರುವುದರಿಂದಾಗಿ ಯಾರು ಸಹ ಅಪಾಯಕ್ಕೆ ಸಿಲುಕಬಾರದೆಂದು ಮುಂಜಾಗ್ರತಾ ಕ್ರಮವಾಗಿ ನದಿ ಪ್ರದೇಶದಲ್ಲಿನ ಜನರು ನದಿ ದಡಕ್ಕೆ ಹೋಗದಂತೆ ನಿಷೇಧಾಜ್ಞೆ ಹೊರಡಿಸಲಾಗುವುದು ಎಂದು ತಿಳಿಸಿದರು.

ಬಳಿಕ ಜಿಲ್ಲಾಧಿಕಾರಿಗಳು, ಶಿವಪುರ ಮತ್ತು ಕವಳಿನಗರಕ್ಕೆ ತೆರಳಿ, ನದಿಗೆ ಹೆಚ್ಚಿನ ನೀರು ಬಿಟ್ಟಿದ್ದರಿಂದಾಗಿ ಆಗಿರುವ ಭತ್ತದ ಬೆಳೆ ಹಾನಿಯ ಬಗ್ಗೆ ಮಾಹಿತಿ ಪಡೆದುಕೊಂಡರು. ಈ ಸಂದರ್ಭದಲ್ಲಿ ಸಹಾಯಕ ಆಯುಕ್ತರಾದ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಕೊಪ್ಪಳ ತಹಸೀಲ್ದಾರರಾದ ವಿಠ್ಠಲ್ ಚೌಗಲಾ, ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಆಡಳಿತ ಅಧಿಕಾರಿಗಳು ಮತ್ತು ಗ್ರಾಮಸ್ಥರು ಇದ್ದರು.

# ಸುದ್ದಿಯಲ್ಲಿ ನೈಜತೆ ಇರಲಿ

## ಜನ ಸತ್ಯಕ್ಕಾಗಿ ಮಾಧ್ಯಮ ಅವಲಂಬನೆ

### ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಹೇಳಿಕೆ



■ ಹಂಪಿ ಟೈಮ್ಸ್ ಕೂಡ್ಲಿಗಿ:

ಪತ್ರಕರ್ತರಿಗೆ ಸಮಾಜದಲ್ಲಿ ಮಹತ್ವದ ಸ್ಥಾನವಿದ್ದು, ಅವರಿಗೆ ಹೊಣೆಗಾರಿಕೆಯೂ ದೊಡ್ಡದಿದೆ ಎಂದು ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರ ಸಭಾಂಗಣದಲ್ಲಿ ಸೋಮವಾರ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಏರ್ಪಡಿಸಿದ್ದ ಪತ್ರಿಕಾ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಮಾಧ್ಯಮಗಳನ್ನು ಸಂವಿಧಾನದ ನಾಲ್ಕನೇ ಅಂಗ ಎಂದು ಕರೆಯುತ್ತಾರೆ. ಆ ನಂಬಿಕೆಯನ್ನು ಮಾಧ್ಯಮಗಳು ಉಳಿಸಿಕೊಳ್ಳಬೇಕು. ಸತ್ಯಕ್ಕೆ ಚ್ಯುತಿ ಬಾರದಂತೆ ನೈಜ ಸುದ್ದಿಗಳನ್ನು ಪ್ರಕಟಿಸಬೇಕು. ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳುಗಳು ಪ್ರಸರಣವಾಗುತ್ತಿವೆ. ಜನರು ಸತ್ಯಕ್ಕಾಗಿ ಮಾಧ್ಯಮಗಳನ್ನು ಅವಲಂಬಿಸಿದ್ದಾರೆ. ಹಾಗಾಗಿ ಪತ್ರಕರ್ತರು ತಮ್ಮನ್ನು ತಾವೇ ವಿಮರ್ಶೆಗೆ ಒಡ್ಡಿಕೊಂಡು ಕರ್ತವ್ಯ ನಿರ್ವಹಿಸಬೇಕು ಎಂದರು. ಕ್ಷೇತ್ರದಲ್ಲಿ ಅನೇಕ ಜಲ್ವಂತ ಸಮಸ್ಯೆಗಳನ್ನು ಪತ್ರಕರ್ತರು ತಮ್ಮ ಪತ್ರಿಕೆಯಲ್ಲಿ ವರದಿಗಳ ನಂತರ ಬಗೆಹರಿಸಿದ್ದು, ಇಂತಹ ವರದಿಗಳ ಮೂಲಕ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಗೆ ಸಮರ್ಪಕವಾಗಿ ಕರ್ತವ್ಯ ನಿರ್ವಹಿಸಲು ಪತ್ರಿಕೆ ಸಹಕಾರಿ ಎಂದರು.

ಈಗಾಗಲೇ ಪತ್ರಕರ್ತರಿಗೆ ಪತ್ರಿಕಾ ಭವನ ನಿರ್ಮಾಣಕ್ಕೆ ಭೂಮಿ ನೀಡಲು ಸ್ವಲ್ಪ ಪಹಣಿಯಲ್ಲಿ ತೊಂದರೆ ಇದ್ದು, ಸರ್ಕಾರದ ಮಟ್ಟದಲ್ಲಿ ಅದು ಬದಲಾಗಬೇಕಿದೆ, ಆದ್ದರಿಂದ ಬೇರೆ ಸೂಕ್ತ ಜಾಗ ನಿಗದಿ ಪಡಿಸಿ ಸುಸಜ್ಜಿತ ಪತ್ರಿಕಾ ಭವನ ನಿರ್ಮಾಣಕ್ಕೆ ಆದ್ಯತೆ ನೀಡಲಾಗುವುದು ಎಂದು ಭರವಸೆ ನೀಡಿದರು. ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಗುಂಡುಮುಣುಗು ತಿಪ್ಪೇಸ್ವಾಮಿ ಮಾತನಾಡಿ, ಪತ್ರಕರ್ತರಿಗೆ ಯಾವುದೇ ನಿಗದಿತ ವೇತನ ಇಲ್ಲ, ಬರುವ ಅಲ್ಪ ಆದಾಯದಲ್ಲಿ ಜೀವನ ಸಾಗಿಸಬೇಕಿದೆ. ಬಿಡಿಸಿಸಿ ಬ್ಯಾಂಕ್ ನಲ್ಲಿ ಉಳಿತಾಯ ಖಾತೆ ಮಾಡಿಸಿದರೆ ಅವರಿಗೆ ಸೂಕ್ತ ಸಾಲ,ಸೌಲಭ್ಯಗಳನ್ನು ಒದಗಿಸಲು ಪ್ರಾಮಾಣಿಕ ಪ್ರಯತ್ನ ಮಾಡತ್ತೇನೆ. ಜತೆಗೆ ಯಶಸ್ವಿನಿ ಯೋಜನೆಯಲ್ಲಿ 5 ಲಕ್ಷ ರೂಪಾಯಿ ವೆಚ್ಚದ ಜೀವಾ ವಿಮಾ ಕಾರ್ಡ್ ಗಳನ್ನು ನೀಡಲು ಮುಂದಾಗುವುದಾಗಿ ತಿಳಿಸಿದರು. ಇದೇ ಸಂಧರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದ ಸಾಧಕರನ್ನು ಸನ್ಮಾನಿಸಲಾಯಿತು. ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಪಿ.ಸತ್ಯನಾರಾಯಣ, ಕಾರ್ಯದರ್ಶಿ ಕೆ.ಲಕ್ಷ್ಮಣ, ರಾಜ್ಯ ಸಮಿತಿ ಸದಸ್ಯ ವೆಂಕೋಬನಾಯಕ, ಡಿವೈಎಸ್ಪಿ ಮಲ್ಲೇಶಪ್ಪ ಮಲ್ಲಾಪುರ, ತಾಪಂ ಇಒ ವೈ. ರವಿಕುಮಾರ್, ಪತ್ರಕರ್ತರ ಸಂಘದ ಜಿಲ್ಲಾ ಉಪಾಧ್ಯಕ್ಷ ಬುಡ್ಡಿ ಬಸವರಾಜ, ತಾಲೂಕು ಅಧ್ಯಕ್ಷ ಮಂಜು ಮಯೂರ, ಗೌರವಾಧ್ಯಕ್ಷ ಕಾವಲಿ ಶಿವಪ್ಪನಾಯಕ, ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಪಿ.ಶಿವರಾಜ್, ನಾಗಮಣಿ ಜಿಂಕಾಲ್, ಟಿ.ಜಿ.ಮಲ್ಲಿಕಾರ್ಜುನ ಗೌಡ, ಉದಯ ಜನ್ನು, ಕೋಗಳಿ ಮಂಜುನಾಥ, ಥಾಣಿ ರಾಘವೇಂದ್ರ, ಹಿರೇಕುಂಬಳಗುಂಟೆ ಉಮೇಶ್, ಓಬಣ್ಣ,ಕೆ.ಈಶಪ್ಪ, ಎಚ್.ವೀರಭದ್ರಪ್ಪ ಸೇರಿದಂತೆ ಅನೇಕರು ಇದ್ದರು.

# ದೇಶ ಸುಭದ್ರಗೊಳಿಸಲು ಮೋದಿ ಸನ್ನದ್ಧ

## ಬಿಜೆಪಿ ಜಿಲ್ಲಾಧ್ಯಕ್ಷ ಚನ್ನಬಸವನಗೌಡ್ರು ಹೇಳಿಕೆ | ಹಗರಿಬೊಮ್ಮನಹಳ್ಳಿ ಮಂಡಲ ವಿಶೇಷ ಸಭೆ

■ ಹಂಪಿ ಟೈಮ್ಸ್ ಕೊಟ್ಟೂರು

ವಿಶ್ವದಲ್ಲಿ ಭಾರತವನ್ನು ವಿಶ್ವಗುರುವಾಗಿಸಲು ನರೇಂದ್ರ ಮೋದಿಯವರು ಮೂರನೇ ಬಾರಿ ಪ್ರದಾನ ಮಂತ್ರಿಯಾಗಿ, ಅಧಿಕಾರದ ಚುಕ್ಕಾಣಿ ಹಿಡಿದಿದ್ದಾರೆ. ಸ್ವಾಭಿಮಾನಿ ಭಾರತೀಯರು ಒಪ್ಪಿಕೊಂಡಿದ್ದಾರೆ, ಕಾಂಗ್ರೆಸ್ಸಿನ ಹಸಿ ಸುಳ್ಳಿಗೆ, ಭಗ್ಗದೆ ದೇಶವನ್ನು ಸುಭದ್ರಗೊಳಿಸಲು ಮೋದಿಯವರು ಸನ್ನದರಿದ್ದಾರೆ ಎಂದು ವಿಜಯನಗರ ಜಿಲ್ಲಾ ಬಿಜೆಪಿ ಅಧ್ಯಕ್ಷ ತಿಮ್ಮಲಾಪುರ ಚನ್ನಬಸವನಗೌಡ್ರು ಹೆಮ್ಮೆ ವ್ಯಕ್ತಪಡಿಸಿದರು.

ಪಟ್ಟಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಹಗರಿಬೊಮ್ಮನಹಳ್ಳಿ ಮಂಡಲ ವಿಶೇಷ ಸಭೆಯಲ್ಲಿ ಮಾತನಾಡಿ. ಬಿಜೆಪಿ ಸ್ವತಂತ್ರವಾಗಿ ಕೇಂದ್ರದಲ್ಲಿ ಸರ್ಕಾರ ರಚಿಸಿದ್ದರೆ ಐತಿಹಾಸಿಕ ನಿರ್ಣಯ ಮತ್ತು ನಿರ್ಧಾರ ತೆಗೆದುಕೊಳ್ಳುತ್ತಿದ್ದರು. ಈಗಲೂ ಕಾಲ ಮಿಂಚಿಲ್ಲ ಗಟ್ಟಿ ನಿರ್ಧಾರ ತೆಗೆದುಕೊಳ್ಳುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದರು.

ರಾಜ್ಯ ಭ್ರಷ್ಟ ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆಯುವ ತನಕ ನಮ್ಮ ಕಾರ್ಯಕರ್ತರು ಹೋರಾಡಬೇಕೆಂದು ಕರೆ ನೀಡಿ. ಕೊಟ್ಟೂರು ಮತ್ತು ಸುತ್ತಮುತ್ತಲ ಹಳ್ಳಿಗಳು ಬಿಜೆಪಿಯ ಶಕ್ತಿ ಕೇಂದ್ರಗಳಾಗಿವೆ ಎಂದು ಮೆಚ್ಚಿಗೆ ವ್ಯಕ್ತಪಡಿಸಿದರು.

ಬಳ್ಳಾರಿ ಜಿಲ್ಲೆಯಿಂದ ನಾಲ್ಕು ಸಾವಿರ ಬಿಜೆಪಿ ಕಾರ್ಯಕರ್ತರು ಭಾಗವಹಿಸಲಿದ್ದಾರೆ ಎಂದರು.



ಪಟ್ಟಣ ಪಂಚಾಯಿತಿ ಸದಸ್ಯ ಹಾಗೂ ಇಂಜಿನಿಯರ್ ಕೆ.ಎಸ್. ಈಶ್ವರಗೌಡ. ಬೇರೆ ಪಕ್ಷದಿಂದ ಬಂದವರಿಗೆ ಪಕ್ಷದಲ್ಲಿ ಸ್ಥಾನ ನೀಡುವ ಮೂಲಕ ಪಕ್ಷ ನಿಷ್ಟೆ ಹಾಗೂ ಸ್ವಾಭಿಮಾನಿ ಕಾರ್ಯಕರ್ತರಿಗೆ ಅನ್ಯಾಮಾಡಿದಂತ್ತಾಗುತ್ತದೆ. ಇದಾಗಬಾರದೆಂದು ಹೇಳಿ, ಮೋದಿಯ ಕೊಡುಗೆ ಪ್ರಸ್ತುತ ಪಡಿಸಿದರು.

ಜಿಲ್ಲಾ ಬಿಜೆಪಿ ಕಾರ್ಯದರ್ಶಿ ವೀರೇಶ ಸ್ವಾಮಿ. ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಹೋರಾಟದ ಸಂಕಲ್ಪ ಮಾಡಿದರು. ಪಟ್ಟಣ ಬಿಜೆಪಿ ಘಟಕದ ಅಧ್ಯಕ್ಷ ಭರಮನಗೌಡ. ಕೆರೆಗೆ ನೀರು ತುಂಬಿಸುವ ಹೋರಾಟಕ್ಕೆ ಹಾಗೂ ಕೊಟ್ಟೂರಿನಲ್ಲಿ ಜೆಎಂಎಫ್ ಸಿ ಕೋರ್ಟ ಸ್ಥಾಪನೆಗೆ ಬಿಜೆಪಿ ಬೆಂಬಲಿಸುತ್ತದೆ ಎಂದರು. ಬಿಜೆಪಿ ಮುಖಂಡ ಮುಟುಗನಹಳ್ಳಿ ಕೊಟ್ರೇಶಪ್ಪ. ಮೂಡಾ ಹಗರಣದಿಂದ ಸಿಎಂ ಸಿದ್ದರಾಮಯ್ಯನ ಮುಖವಾಡ ಕಳಚಿದೆ. ಕ್ಷೇತ್ರದಲ್ಲಿ ನಾವು ಸೋತ್ತಿದ್ದರು. ಗ್ರಾಮೀಣ ಪ್ರದೇಶದಲ್ಲಿ ಬಿಜೆಪಿ ಗಟ್ಟಿಯಾಗಿದೆ ಎಂದರು. ಮಂಡಲ ಅಧ್ಯಕ್ಷ ಪ್ರಕಾಶ ಲೋಕಸಭಾ ಚುನಾವಣೆಯಲ್ಲಿ ಹಾಲಿ ಶಾಸಕರು ಬಿಜೆಪಿ ಅಭ್ಯರ್ಥಿ ಬಗ್ಗೆ ಮತ್ತು ಮೋದಿಯವರ ಕೊಡೆಗೆ ಬಗ್ಗೆ ಪ್ರಸ್ತಾಪ ಮಾಡದೆ, ತನ್ನ ಸ್ವಾಭಿಮಾನ ಮಾತುಗಳಿನ್ನಾಡಿದರು ವಿಶ್ವಾಸಕ್ಕೆ ತಗೆದುಕೊಳ್ಳದ ಕಾರಣ ಕ್ಷೇತ್ರದಲ್ಲಿ ಬೀಜೆಪಿ ಹಿನ್ನಡೆಯಾಗಿದೆ ಎಂದು ಹೇಳಿದರು.

ಜಿಲ್ಲಾ ಸಮಿತಿ ರಾಘವೇಂದ್ರ, ಜೈಯಪ್ರಕಾಶ. ಅಂಗಡಿ ಪಂಪಾಪತಿ. ಕೋಗಳಿ ಹನುಮಂತಪ್ಪ. ಎಂ. ಕೊಟ್ರೇಶ. ಗೊಲ್ಲರಹಳ್ಳಿ ಉಮೇಶ ಮುಂತಾದವರಿದ್ದರು. ಅಂಗಡಿ ಪಂಪಾಪತಿ ಪ್ರಾಸ್ತಾವಿಕವಾಗಿ ಮಾತನಾಡಿದರು ವೇದಿಕೆಯಲ್ಲಿ ತಾಪಂ ಮಾಜಿ ಅಧ್ಯಕ್ಷ ಹರಾಳು ಗುರುಮೂರ್ತಿ. ಪಪಂ ಸಿದ್ದಯ್ಯ ಹಲವಾರು ಪ್ರಮುಖರಿದ್ದರು. ಸ್ವಾಗತ ಜೋಗಿ ಹನುಮಂತ. ಸಿ.ಶಿವಪ್ರಕಾಶ ವಂದಿಸಿದರು ರಾಜೇಶ್ವರಿ ಪ್ರಾರ್ಥಿಸಿದರು.

## ನೂತನ ಅಪರ ಜಿಲ್ಲಾಧಿಕಾರಿಯಾಗಿ ಸಿದ್ರಾಮೇಶ್ವರ ಅಧಿಕಾರ ಸ್ವೀಕಾರ

■ ಹಂಪಿ ಟೈಮ್ಸ್ ಕೊಪ್ಪಳ

ಕೊಪ್ಪಳ ಜಿಲ್ಲೆಯ ನೂತನ ಅಪರ ಜಿಲ್ಲಾಧಿಕಾರಿಯಾಗಿ ಸಿದ್ರಾಮೇಶ್ವರ ಅವರು ಜುಲೈ 29ರಂದು ಅಧಿಕಾರ ವಹಿಸಿಕೊಂಡರು. ಈ ಮೊದಲು ಅಪರ ಜಿಲ್ಲಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಸಾವಿತ್ರಿ ಬಿ ಕಡಿ ಅವರ ವರ್ಗಾವಣೆಯಾಗಿದ್ದು, ಇವರ ಸ್ಥಾನಕ್ಕೆ ಹಿರಿಯ ಶ್ರೇಣಿಯ ಕೆ.ಎ.ಎಸ್ ಅಧಿಕಾರಿಯಾಗಿರುವ ಸಿದ್ರಾಮೇಶ್ವರ ಅವರಿಗೆ ಕೊಪ್ಪಳ ಅಪರ ಜಿಲ್ಲಾಧಿಕಾರಿಯಾಗಿ ಸರ್ಕಾರ ನೇಮಿಸಿದ ಹಿನ್ನೆಲೆಯಲ್ಲಿ ಸೋಮವಾರದಂದು ಅಧಿಕಾರ ವಹಿಸಿಕೊಂಡರು.

ಸಿದ್ರಾಮೇಶ್ವರ ಅವರು 2014ರ ಕೆಎಎಸ್ ಬ್ಯಾಚ್ ಅಧಿಕಾರಿಯಾಗಿದ್ದು, ಈ ಹಿಂದೆ ಕೊಪ್ಪಳ ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾಗಿ, ಹೊಸಪೇಟೆ ಉಪವಿಭಾಗಾಧಿಕಾರಿಯಾಗಿ, ಹಂಪಿ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರಾಗಿ, ಬೀದರ್ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಅಪರ ಜಿಲ್ಲಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದಾರೆ.


## ವಿಜ್ಞಾನ

# ಗ್ಯಾಸ್ಟ್ರಿಕ್ ಏಕೆ ಉಂಟಾಗುತ್ತದೆ?

■ ಆರ್.ಬಿ.ಗುರುಬಸವರಾಜ

'ಲೇಯ್, ಸ್ವಲ್ಪ ನಿಂಬೆ ಸೋಡಾ ಮಾಡಿಕೊಡೆ. ಯಾಕೋ ಗ್ಯಾಸ್ಟ್ರಿಕ್ ಆಗಿದೆ' ಎಂದು ಅಪ್ಪ ಅಮ್ಮನಿಗೆ ಹೇಳಿದರು. ಅಲ್ಲೇ ಓದುತ್ತಾ ಕುಳಿತಿದ್ದ ಶಿವರಾಜ ಇದನ್ನು ಕೇಳಿಸಿಕೊಂಡ. ಅಪ್ಪ ಹೊಟ್ಟೆಯ ಮೇಲೆ ಕೈಯಾಡಿಸಿಕೊಳ್ಳುತ್ತಾ ಕುಳಿತಿದ್ದರು. ಅಷ್ಟರಲ್ಲಿ ಅಮ್ಮ ಸೋಡಾ ತಂದರು. ಅದನ್ನು ಕುಡಿದ ಅಪ್ಪ 'ಡರ್,,,' ಎಂದು ತೇಗಿದರು. "ಹಾ,, ಈಗ ಸ್ವಲ್ಪ ಸಮಾದಾನ ಆಯ್ತು ನೋಡು" ಎಂದರು. ಇದನ್ನೆಲ್ಲ ಮೂಕ ಪ್ರೇಕ್ಷಕನಂತೆ ನೋಡುತ್ತಿದ್ದ ಶಿವರಾಜನ ಮನಸ್ಸಿನಲ್ಲಿ ಒಂದು ಪ್ರಶ್ನೆ ಮೂಡಿತು. ಅದನ್ನು ತಂದೆಗೆ ಕೇಳಿಯೇ ಬಿಟ್ಟ. "ಅಪ್ಪಾಜಿ, ಗ್ಯಾಸ್ಟ್ರಿಕ್ ಏಕೆ ಉಂಟಾಗುತ್ತದೆ?" ಎಂದನು. ಗ್ಯಾಸ್ಟ್ರಿಕ್ ಸಮಸ್ಯೆಯಿಂದ ಕೊಂಚ ಸಮಾದಾನಗೊಂಡಿದ್ದ ತಂದೆ ಮಗನಿಗೆ ಅದರ ಬಗ್ಗೆ ಹೇಳತೊಡಗಿದರು.

ಗ್ಯಾಸ್ಟ್ರಿಕ್ ಜೀರ್ಣಕ್ರಿಯೆಗೆ ಸಂಬಂಧಿಸಿದೆ. ಜೀರ್ಣಕ್ರಿಯೆಯು ನೈಸರ್ಗಿಕವಾಗಿ ನಡೆಯುವ ಪ್ರಕ್ರಿಯೆಯಾಗಿದೆ. ಇದು ಹೊಟ್ಟೆ ಮತ್ತು ಸಣ್ಣ ಕರುಳಿನಲ್ಲಿ ಆಹಾರದ ವಿಭಜನೆಯನ್ನು ಒಳಗೊಂಡಿರುತ್ತದೆ. ಹೊಟ್ಟೆಯ ಆಮ್ಲ ಮತ್ತು ಜೀರ್ಣಕಾರಿ ಕಿಣ್ವಗಳಿಂದ ಆಹಾರವನ್ನು ವಿಭಜಿಸುವು ದರಿಂದ ಜೀರ್ಣಕ್ರಿಯೆಯಲ್ಲಿ ಕಾರ್ಬನ್ ಡೈಆಕ್ಸೈಡ್, ಮೀಥೇನ್ ಮತ್ತು ಹೈಡ್ರೋಜನ್ ನಂತಹ ಅನಿಲಗಳು ಬಿಡುಗಡೆ



ಯಾಗುತ್ತವೆ. ಈ ಅನಿಲಗಳು ಹೊಟ್ಟೆಯಲ್ಲಿ ಸಂಗ್ರಹವಾಗುತ್ತವೆ. ಇದರಿಂದ ಕೆಲವು ವೇಳೆ ಅಸ್ವಸ್ಥತೆ ಅಥವಾ ಹೊಟ್ಟೆಯಲ್ಲಿ ಕಿರಿಕಿರಿ ಅನುಭವವಾಗುತ್ತದೆ. ಹೀಗೆ ಜೀರ್ಣಕ್ರಿಯೆಯ ಸಾಮಾನ್ಯ ಭಾಗವಾಗಿ ನಮ್ಮ ಹೊಟ್ಟೆ ಮತ್ತು ಕರುಳಿನಲ್ಲಿ ಉಂಟಾಗುವ ಅನಿಲ ಉಂಟಾಗುವಿಕೆಯನ್ನೇ ಗ್ಯಾಸ್ಟ್ರಿಕ್ ಎನ್ನುತ್ತಾರೆ.

ನಾವು ತಿನ್ನುವಾಗ ಅಥವಾ ಕುಡಿಯುವಾಗ ಆಹಾರ ಅಥವಾ ಪಾನೀಯದೊಂದಿಗೆ ಗಾಳಿಯನ್ನು ನುಂಗುತ್ತೇವೆ. ಈ ಗಾಳಿಯು ಜೀರ್ಣಾಂಗ ವ್ಯವಸ್ಥೆಯಲ್ಲಿ ಸಂಗ್ರಹಗೊಳ್ಳುತ್ತದೆ ಮತ್ತು ಅನಿಲವನ್ನು ಉಂಟುಮಾಡುತ್ತದೆ. ನುಂಗಿದ ಗಾಳಿಯ ಜೊತೆಗೆ ನಮ್ಮ ಕರುಳಿನಲ್ಲಿರುವ ಬ್ಯಾಕ್ಟೀರಿಯಾಗಳು ಆಹಾರವನ್ನು ವಿಘಟಿಸುವುದರಿಂದಲೂ ಅನಿಲ ಉತ್ಪಾದನೆಯಾಗುತ್ತದೆ. ಕಾರ್ಬೋಹೈಡ್ರೇಟ್‌ಗಳನ್ನು ಹೊಂದಿದ ತರಕಾರಿಗಳು ಮತ್ತು ಬೇಳೆಕಾಳುಗಳನ್ನು ಜೀರ್ಣಿಸಿಕೊಳ್ಳಲು ಕಷ್ಟಕರವಾಗುತ್ತದೆ. ಕಾಳುಗಳಂತಹ ಕೆಲ ಆಹಾರ ಪದಾರ್ಥಗಳು ದೊಡ್ಡ ಕರುಳನ್ನು ತಲುಪಿದಾಗ ಹುದುಗುವಿಕೆ ಪ್ರಕ್ರಿಯೆಗೆ ಒಳಪಡುತ್ತವೆ. ಇದರಿಂದಾಗಿಯೂ ಅನಿಲ ಉತ್ಪಾದನೆಯಾಗುತ್ತದೆ.

ಆಹಾರವನ್ನು ವೇಗವಾಗಿ ತಿನ್ನುವುದು, ಸರಿಯಾಗಿ ಅಗಿಯದೇ ನುಂಗುವುದು, ಧೂಮಪಾನ ಮತ್ತು ಕಾರ್ಬೋನೇಟೆಡ್ ಪಾನೀಯಗಳನ್ನು ಸೇವಿಸುವುದರಿಂದಲೂ ಗ್ಯಾಸ್ಟ್ರಿಕ್ ಉಂಟಾಗುತ್ತದೆ. ಕೆಲವು ವೈದ್ಯಕೀಯ ಪರಿಸ್ಥಿತಿಗಳಾದ ಕರುಳಿನ ಉರಿ, ಲ್ಯಾಕ್ಟೋಸ್‌ನ ಉತ್ಪಾದನೆಯಲ್ಲಿ ತೊಂದರೆ ಮತ್ತು ಇತರ ಜೀರ್ಣಕಾರಿ ಅಸ್ವಸ್ಥತೆಗಳಿಂದ ಹೊಟ್ಟೆಯಲ್ಲಿ ಅನಿಲ ರಚನೆಗೆ ಕಾರಣವಾಗಬಹುದು. ಸಿಟ್ರಸ್ ಆಕ್ಸೈಡ್ ಬಳಕೆಯಿಂದ ಇದನ್ನು ನಿವಾರಿಸಬಹುದು. ಆದಾಗ್ಯೂ ಹೆಚ್ಚಿನ ತೊಂದರೆ ನಿವಾರಣೆಗೆ ವೈದ್ಯರನ್ನು ಭೇಟಿಯಾಗುವುದು ಒಳಿತು.

## ಮಕ್ಕಳು ಅರಸರಾಗಬೇಕೆ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ದಿಟ್ಟ ಹೆಜ್ಜೆಯ ಮೌನ ಸಾಧಕ... ದಾನ ಚಿಂತಾಮಣಿ... ಅಕ್ಕಿ ಕೊಟ್ರಪ್ಪ

ಕಲ್ಯಾಣ ಕರ್ನಾಟಕವು ಶರಣರು ನಡೆದಾಡಿದ ಪುಣ್ಯ ನೆಲ. ಶರಣರ ವೈಚಾರಿಕ ನೆಲೆಯ ಜೊತೆಗೆ ಕಾಯಕ, ದಾಸೋಹ, ದಾನ ಧರ್ಮಗಳು ಈ ಮಣ್ಣಿನಲ್ಲಿ ಬೆರೆತುಕೊಂಡಿವೆ. ಅದರ ಫಲವಾಗಿ ಜನರ ಮನದಲ್ಲಿ ಈ ಗುಣಗಳು ಸದಾ ಹಸಿರಾಗಿವೆ. ಆ ಹಸಿರು ಕೆಲವರಲ್ಲಿ ಹೂವಾಗಿ, ಕಾಯಿಯಾಗಿ, ಹಣ್ಣಾಗಿ ಎಲ್ಲರಿಗೂ ಸಿಹಿಯನ್ನು ಹಂಚಿದ ಸಾಕಷ್ಟು ಮಹನೀಯರ ಉದಾಹರಣೆಗಳನ್ನು ಈ ಪ್ರದೇಶದಲ್ಲಿ ಕಾಣುತ್ತೇವೆ. ಈ ಮಹನೀಯರು ಎಂದೂ ಪ್ರಚಾರವನ್ನು ಬಯಸದೇ, ತಾವಾಯಿತು ತಮ್ಮ ಕೆಲಸವಾಯಿತು ಎನ್ನುವಂತೆ ತಮ್ಮನ್ನು ಸಮಾಜಮುಖಿಯಾಗಿ ತೊಡಗಿಸಿಕೊಂಡಿರುತ್ತಾರೆ. ಎಲೆಮರೆಯ ಕಾಯಂತೆ ಇರುವ ಇಂತಹ ಶರಣರಲ್ಲಿ ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿಗೆ ಸೇರಿದ ತಂಬ್ರಹಳ್ಳಿಯ ಅಕ್ಕಿ ಕೊಟ್ರಪ್ಪನವರು ಅಗ್ರಗಣ್ಯರಾಗಿದ್ದಾರೆ.

ತಂಬ್ರಹಳ್ಳಿಯ ಶ್ರೀ ಅಕ್ಕಿ ತೋಟಪ್ಪ ಮತ್ತು ಶ್ರೀಮತಿ ಅಕ್ಕಿ ಬಸಮ್ಮ ದಂಪತಿಗಳ ದ್ವಿತೀಯ ಪುತ್ರರಾಗಿ ಅಕ್ಕಿ ಕೊಟ್ರಪ್ಪ ಜೂನ್ 13, 1933 ರಂದು ಜನಿಸಿದರು. ಇವರು ಸಣ್ಣವರಿರುವಾಗ ತಂದೆ ತೀರಿಕೊಂಡಿದ್ದರಿಂದ, ತಾಯಿ ಮತ್ತು ಸೋದರ ಮಾವನ ಆಶ್ರಯದಲ್ಲಿ ಬೆಳೆದರು. 6ನೇ ತರಗತಿಗೆ ಶಾಲೆಗೆ ಗುಡ್ ಬೈ ಹೇಳಿ ಮನೆಯ ಹಿರಿಯರ ನಿರ್ವಹಿಸುತ್ತಿದ್ದ ವ್ಯವಸಾಯಕ್ಕೆ ಇಳಿದರು. ಆ ಸಮಯದಲ್ಲಿ ಈ ಭಾಗದ ಗಾಂಧಿ ಎಂದೇ ಪ್ರಸಿದ್ಧರಾದ ಬಾಚಿಗೊಂಡನಹಳ್ಳಿಯ ಚೆನ್ನಬಸವನಗೌಡರ ಮುಖಂಡತ್ವದಲ್ಲಿ ಸಹಕರ ಸಂಘದ ಸ್ಟೋರ್ ಪ್ರಾರಂಭವಾಯಿತು. ಅದರಲ್ಲಿ ಗುಮಾಸ್ತರಾಗಿ ಇವರು ಕೆಲಸಕ್ಕೆ ಸೇರಿದರು. ಅದರ ಮುಖಾಂತರ ತುಂಗಭದ್ರ ಅಣೆಕಟ್ಟಿನಿಂದ ನಿರಾಶ್ರಿತರಿಗೆ ಪುರ್ನವಸತಿಗಾಗಿ ಮನೆ ಕಟ್ಟುವ ಸಾಮಾಗ್ರಿಗಳನ್ನು ಅತ್ಯಂತ ಪ್ರಾಮಾಣಿಕವಾಗಿ ವಿತರಿಸಿದರು. ಕೊಟ್ರಪ್ಪನವರ ಈ ಕಾಯಕ ಅವರನ್ನು ಹೆಚ್ಚು ಜನಪ್ರಿಯ ಗೊಳಿಸುತ್ತಾ, ಸುತ್ತ ಮುತ್ತಲಿನ ಪ್ರದೇಶದಲ್ಲಿ ಹೆಸರುವಾಸಿಯಾಗುವಂತೆ ಮಾಡಿತು.

ಗುಮಾಸ್ತರಾಗಿ 17 ವರ್ಷದ ಸೇವೆ ಸಲ್ಲಿಸಿದ ಫಲ ಹಾಗೂ ಜನರ ಪ್ರೀತಿಯಿಂದಾಗಿ 1968ರಲ್ಲಿ ಪಂಚಾಯಿತಿ ಸದಸ್ಯರಾಗಿ ಆಯ್ಕೆಯಾದರು. ನಂತರ 1978ರವರೆಗೂ ಅಂದಿನ ಮಂಡಲದ ಪಂಚಾಯಿತಿ ಪ್ರಧಾನರಾಗಿ ಜನಮನ್ನಣೆ ಗಳಿಸಿದರು. ಕೊಟ್ರಪ್ಪನವರ ಜನಪ್ರಿಯತೆ ಕಂಡು ಚೆನ್ನಬಸವನಗೌಡರು ಇವರನ್ನು ವಿಧಾನಸಭೆಗೆ ಸ್ಪರ್ಧಿಸುವಂತೆ ಕೇಳಿದರು. ಆದರೆ ಎಂದಿಗೂ ಅಧಿಕಾರ, ಅಂತಸ್ತಿಗಾಗಿ ಆಸೆ ಪಡದ ಕೊಟ್ರಪ್ಪನವರು ಅದನ್ನು ನಯವಾಗಿ ತಿರಸ್ಕರಿಸಿ, ಮತ್ತೆ ಚೆನ್ನಬಸವನಗೌಡರನ್ನು ಚುನವಣೆಗೆ ನಿಲ್ಲಿಸಿ, ಗೆಲ್ಲುವಲ್ಲಿ ಪ್ರಮುಖ ಪಾತ್ರವಹಿಸಿದರು.

ತಮ್ಮ ಬದುಕಿಗಾಗಿ ಕಿರಾಣಿ ಅಂಗಡಿ, ಕಾಳು-ಕಡಿ ವ್ಯಾಪಾರ, ಹಣಕಾಸಿನ ವ್ಯವಹಾರವನ್ನು ಸತ್ಯ, ನ್ಯಾಯ, ದಕ್ಷತೆ ಮತ್ತು ಮಾನವೀಯ ಗುಣಗಳಿಂದಾಗಿ, ಅತ್ಯಂತ ಸಂಕಷ್ಟದ ದಿನಗಳಿಂದ ಮುಕ್ತರಾಗಿ ಮೇಲೆದ್ದು ಬಂದರು. ಕುಟುಂಬದವರನ್ನು ಮಾತ್ರವಲ್ಲದೇ ತಮ್ಮ ಸುತ್ತ ಮುತ್ತಲಿನ ಎಲ್ಲರನ್ನೂ ಪ್ರೀತಿಸುವ ಬಹುದೊಡ್ಡ ವಿಶಾಲ ಮನಸ್ಸನ್ನು ಅವರು ಹೊಂದಿದ್ದಾರೆ. ಯಾವುದೇ ಜಾತಿ, ಧರ್ಮ ಎಂದು ತಾರತಮ್ಯ ಮಾಡದೇ ಎಲ್ಲರನ್ನು ಬರಸೆಳೆದು ಅಪ್ಪಿಕೊಳ್ಳುವ ಗುಣ ಹೊಂದಿದ್ದರಿಂದ ಕೊಟ್ರಪ್ಪನವರ ಹೆಸರು ಎಲ್ಲರ ನಾಲಿಗೆಯಲ್ಲಿಯೂ ನಲಿದಾಡುತ್ತಿದೆ.



ಡಾ.ಪರಮೇಶ್ವರಯ್ಯ ಸೊಪ್ಪಿಮಠ
ಶಿಕ್ಷಕರು, ಹಗರಿಬೊಮ್ಮನಹಳ್ಳಿ

Scan For Digital Colourful
HAMPI TIMES E-paper

1980ರ ಸಮಯದಲ್ಲಿ ಚನ್ನಬಸವನಗೌಡರು 18 ವರ್ಷಗಳ ಕಾಲ ಎಂಎಲ್ಲಿ ಆಗಿ ನಿವೃತ್ತಿಯಾಗಿದ್ದರು. ಅದೇ ಸಮಯದಲ್ಲಿ ಕರ್ನಾಟಕ ರಾಜ್ಯದಲ್ಲಿ ಗುಂಡೂರಾಯರು ಮುಖ್ಯ ಮಂತ್ರಿ ಗಳಾಗಿದ್ದರು. ನರಗುಂದದಲ್ಲಿ ರೈತರ ಮೇಲೆ ಗೋಲಿಬಾರ್ ನಡೆಯಿತು. ಇದಕ್ಕೆ ವಿರುದ್ಧವಾಗಿ ರಾಜ್ಯಾದ್ಯಂತ ರೈತರ ಚಳವಳಿಗೆ ತೀವ್ರಗೊಂಡಿತು. ಚೆನ್ನ ಬಸವನಗೌಡರು ಮತ್ತು ಅಕ್ಕಿ ಕೊಟ್ರಪ್ಪನವರ ನೇತೃತ್ವದಲ್ಲಿ 25ಕ್ಕೂ ಹೆಚ್ಚು ಜನ ಈ ಪ್ರಕರಣವನ್ನು ಖಂಡಿಸಿ ಸರ್ಕಾರದ ವಿರುದ್ಧ ತಾಲ್ಲೂಕು ಕಚೇರಿ ಮುಂದೆ ಪ್ರತಿಭಟನೆ ಮಾಡಿದರು. ಅದರ ಫಲವಾಗಿ ಇವರೆಲ್ಲರನ್ನೂ ಸರ್ಕಾರ ಬಂಧಿಸಿತು. ಹಡಗಲಿ ನ್ಯಾಯಾಲಯದಲ್ಲಿ ಈ ಕುರಿತು ವಿಚಾರಣೆ ನಡೆಯಿತು. ಆಗ ಮಾನ್ಯ ಎಂ.ಪಿ.ಪ್ರಕಾಶ್ ಅವರು ಇವರ ವಕೀಲರಾಗಿದ್ದರು. ನ್ಯಾಯಾಲಯದಲ್ಲಿ ಇವರಿಗೆ ತಪ್ಪು ಒಪ್ಪಿಕೊಳ್ಳಿ ನಿಮ್ಮನ್ನು ಬಿಟ್ಟುಬಿಡುತ್ತೇವೆ ಎಂದಾಗ ಕೊಟ್ರಪ್ಪನವರ ಸಹಿತ ಯಾರು ಒಪ್ಪಲಿಲ್ಲ. ಕೊನೆಗೆ ಇವರಿಗೆ ಏಳು ದಿನಗಳ ಜೈಲು ಶಿಕ್ಷೆಯಾಯಿತು. ಅದಾದ ನಂತರ ಹುಬ್ಬಳ್ಳಿಯಲ್ಲಿ ರೈತ ಸಂಘದ ಸಭೆಗೆ ಇವರು ಹಾಜರಾದರು. ಮರಳಿ ತಂಬ್ರಹಳ್ಳಿಗೆ ಬರುವಾಗ ಚೆನ್ನಬಸವನಗೌಡರು ಗದುಗಿನ ತೋಂಟದಾರ್ಯ ಮಠಕ್ಕೆ ಕರೆದು ಕೊಂಡು ಹೋದರು. ಅಲ್ಲಿ ಅಜ್ಜನವರ ದರ್ಶನದ ನಂತರ ಪೂಜ್ಯರ ವ್ಯಕ್ತಿತ್ವ, ಗಾಂಭೀರ್ಯ, ನುಡಿಗಳನ್ನು ಕಂಡು ಅಚ್ಚರಿ ಪಟ್ಟು ಅವರಿಗೆ ಶರಣಾದರು. ಇದು ಕೊಟ್ರಪ್ಪನವರ ಜೀವನದಲ್ಲಿ ಮಹತ್ತರ ಘಟನೆಯಾಗಿ, ಅವರೊಳಗಿದ್ದ ಸಮಜಮುಖಿ ಭಾವನೆಯನ್ನು ಉಜ್ವಲಗೊಳಿಸಿತು.

ಕೊಟ್ಟಪ್ಪನವರ ಮತ್ತು ಗದುಗಿನ ಶ್ರೀಗಳ ಒಡನಾಟ, ಬ್ಯಾಂಧವ್ಯ ದಿನದಿಂದ ದಿನಕ್ಕೆ ವೃದ್ಧಿಯಾಯಿತು. ತೋಂಟದಶ್ರೀಗಳಿಗೆ ಚೆನ್ನಬಸವನಗೌಡರು ಬಗ್ಗೆ ಅಪಾರವಾದ ಗೌರವವಿತ್ತು. ಅವರ ಬದುಕು ಮತ್ತು ಸಾಧನೆ ಇಂದಿನವರಿಗೆ ಮಾದರಿಯಾಗಲಿ ಎಂದು ಗದಗಿನ ಮಠದಿಂದ "ಮಲ್ಲಿಗೆನಾಡ ಗಾಂಧಿ" ಪುಸ್ತಕ ಪ್ರಕಟಿಸಿದ್ದರು. ಕೆಲವು ದಿನಗಳಲ್ಲಿ ಆ ಪುಸ್ತಕಗಳು ಮುಗಿದುಹೋದವು. ಆ ಹೊತ್ತಿಗೆಯನ್ನು ಮತ್ತೆ ಪ್ರಕಟಿಸಬೇಕೆಂದು ಚೆನ್ನಬಸವನಗೌಡರ ಪುತ್ರರಾದ ಕೊಟ್ರಗೌಡ ಮತ್ತು ವಿರುಪಾಕ್ಷಗೌಡರು ಮತ್ತು ಇತರರು ಪೂಜ್ಯ ಅಜ್ಜನವರಲ್ಲಿ ವಿನಂತಿ ಮಾಡಿಕೊಂಡರು. ಅಜ್ಜನವರು ನಾವು ಮೊದಲ ಬಾರಿ ಪ್ರಕಟಿಸಿದ್ದೇವೆ, ಎರಡನೇ ಬಾರಿಗೆ ಪ್ರಕಟಿಸಬೇಕಾದಲ್ಲಿ ತಾವು ದಾನಿಗಳಿಂದ ಹತ್ತು ಸಾವಿರ ರೂ ಸಂಗ್ರಹಿಸಿ ಕೊಡಲು ಸೂಚಿಸಿದರು. ಆದರೆ ಆ ಕುಟುಂಬದವರು ಆರ್ಥಿಕವಾಗಿ ಸಬಲರಾಗಿದ್ದಿಲ್ಲ. ಆಗ ಕೊಟ್ರಗೌಡರು ನಮ್ಮ ತಂದೆಯವರಿಗೂ ಹಾಗೂ ತಂಬ್ರಹಳ್ಳಿಯ ಅಕ್ಕಿ ಕೊಟ್ರಪ್ಪನವರಿಗೂ ಒಳ್ಳೆಯ ಬಾಂಧವ್ಯವಿದೆ. ಹಾಗಾಗಿ ಶ್ರೀಗಳಿಗೆ, ನೀವೇ ಕೊಟ್ರಪ್ಪನವರಿಗೆ ಪತ್ರ ಬರೆಯಿರಿ, ಎಂದಾಗ ಗದುಗಿನ ಶ್ರೀಗಳು ಅಕ್ಕಿಕೊಟ್ರಪ್ಪನವರಿಗೆ ಈ ವಿಷಯ ಕುರಿತು ಪತ್ರವನ್ನು ಬರೆದರು.

ಆ ಪತ್ರದಲ್ಲಿ 'ನೀವು ಚೆನ್ನಬಸವನಗೌಡರ ಅನುಯಾಯಿಗಳು. ನಿಮಗೂ ಅವರ ಬಗ್ಗೆ ಅಭಿಮಾನವಿದೆ. ಅವರ ಕುರಿತು ಮೊದಲ ಮುದ್ರಣ ಪುಸ್ತಕ ಮುಗಿದಿದೆ. ನೀವು ಹತ್ತು ಸಾವಿರ ನೀಡಿದರೆ,



ಎರಡನೇ ಮುದ್ರಣ ಮಾಡಿಸುತ್ತೇವೆ. ನಿಮ್ಮ ಹೆಸರನ್ನು ಮುದ್ರಣ ಸೇವೆ ಎಂದು ಪ್ರಕಟಿಸುತ್ತೇವೆ' ಎಂದು ಬರೆದರು. ಆದರೆ ಕೊಟ್ರಪ್ಪನವರು ಅದಕ್ಕೆ ಮರು ಪತ್ರ ಬರೆಯದೇ, 3-4 ದಿನಗಳ ನಂತರ ನೇರವಾಗಿ ಗದಗಿನ ಮಠಕ್ಕೆ ಹೋದರು. ಅಜ್ಜನವರನ್ನು ಭೇಟಿಯಾಗಿ ಪತ್ರದ ಬಗ್ಗೆ ವಿಚಾರಿಸಿದರು.

ಆಗ ಶ್ರೀಗಳು "ಹೌದು ನೀವು ಹತ್ತು ಸಾವಿರ ಕೊಟ್ಟರೆ, ನಾವು ಆ ಪುಸ್ತಕವನ್ನು ಎರಡನೆ ಮುದ್ರಣ ಮಾಡಿಸುತ್ತೇವೆ" ಎಂದರು.

ಆಗ ಇವರು "ಹತ್ತು ಸಾವಿರ ಕೊಡುತ್ತೇನೆ, ಪ್ರಿಂಟ್ ಹಾಕಿರುತ್ತೀರಿ, ಅವು ಮುಗಿದ ಮೇಲೆ ಮುಂದೇನು?" ಎಂದರು. ಆಗ ಪೂಜ್ಯರು "ಹೌದು ಇದು ಯೋಚಿಸಬೇಕಾದ್ದು?" ಎಂದರು.

ಅದಕ್ಕೆ ಕೊಟ್ರಪ್ಪನವರು ಪೂಜ್ಯರಿಗೆ "ಚೆನ್ನಬಸವನಗೌಡರು ತುಂಬಾ ಒಳ್ಳೆಯವರು. ಅದಕ್ಕೆ ನಾನು ಒಂದು ಲಕ್ಷ ರೂಪಾಯಿ ಕೊಡುತ್ತೇನೆ. ತಾವು ಅದನ್ನು ಬ್ಯಾಂಕಿನಲ್ಲಿ ಠೇವಣಿಯಾಗಿಡಿ. ಅದರಲ್ಲಿ ಬರುವ ವಾರ್ಷಿಕ ಬಡ್ಡಿಯನ್ನು ಇಂತಹ ಪುಸ್ತಕ ಪ್ರಕಟಣೆಗಳಿಗೆ ಬಳಸಬಹುದು" ಎಂದು ಸಲಹೆ ನೀಡಿದರು. ಅದಕ್ಕೆ ಅಜ್ಜನವರು ತುಂಬಾ ಸಂತೋಷ ಪಟ್ಟು, ಇವರನ್ನು ಮನದುಂಬಿ ಹರಸಿದರು.

ಶ್ರೀಗಳಿಗೆ ನೀಡಿದ ವಚನದಂತೆ ಬಾಚಿಗೊಂಡನಹಳ್ಳಿಯ ಕೌದಿ ಮಹಾಂತೇಶ್ವರ ಪ್ರೌಢಶಾಲೆಯಲ್ಲಿ ಒಂದು ಲಕ್ಷ ರೂಪಾಯಿ ಠೇವಣಿ ಇಟ್ಟರು. ಅದು ಪುಸ್ತಕ ಪ್ರಕಟಣೆ, ಶಾಲೆಯ ಮಕ್ಕಳ ಓದಿಗೆ ಇಂದಿಗೂ ಆಸರೆಯಾಗಿದೆ.

ಅಕ್ಕಿ ಕೊಟ್ರಪ್ಪನವರಿಗೆ ತಾವು ನೀಡಿದ ದಾನದಿಂದ ಅಗುತ್ತಿರುವ ಮಹತ್ತರ ಕೆಲಸ ಕಂಡು ಸಂತುಷ್ಟರಾದರು. ಇದು ಇಷ್ಟಕ್ಕೆ ನಿಲ್ಲಬಾರದು ಎಂದು ಯೋಚಿಸಿ, ಗದುಗಿನ ಶ್ರೀ ಮಠಕ್ಕೂ ಏನಾದರೂ ದೇಣಿಗೆ ನೀಡಬೇಕು ಎಂಬ ಇವರ ಅಭಿಲಾಷೆಗೆ ಕುಟುಂಬದ ಎಲ್ಲರೂ ಸಕಾರಾತ್ಮಕವಾಗಿ ಸ್ಪಂದಿಸಿದರು. ತಕ್ಷಣವೇ ಇವರು 'ಶ್ರೀಮತಿ ಅಕ್ಕಿ ಬಸಮ್ಮ ತೊಟಪ್ಪ ದತ್ತಿ' ಹೆಸರಿನಲ್ಲಿ ಗದುಗಿನ ತೋಟದಾರ್ಯ ಪೀಠಕ್ಕೆ ಒಂದು ಲಕ್ಷ ರೂಪಾಯಿ ದೇಣಿಗೆ ನೀಡಿದರು. ಒಂದು ಲಕ್ಷ ರುಪಾಯಿ ಹಣವನ್ನು ಶ್ರೀಗಳು ಡೆಪಾಜಿಟ್ ಆಗಿ ಇಡಲು ನಿರ್ಧರಿಸಿದರು. ಆ ಹಣಕ್ಕೆ ಪ್ರತಿವರ್ಷ ಬರುವ ಬಡ್ಡಿಹಣದಲ್ಲಿ ಪುಸ್ತಕ ಪ್ರಕಟಣೆ, ಬಡ ಮಕ್ಕಳ ಶಿಕ್ಷಣ, ಮಕ್ಕಳ ಓದಿಗೆ, ಮಠದ ಕಾರ್ಯಕ್ರಮಕ್ಕೆ ಸೇರಿದಂತೆ ಯಾವುದಾದರೂ ಕಾರ್ಯಕ್ರಮಕ್ಕೆ ಬಳಸಿಕೊಳ್ಳವ ಬಗ್ಗೆ ಶ್ರೀಗಳಲ್ಲಿ ವಿನಂತಿಸಿದರು. 'ದುಡಿಮೆಯ ಸ್ವಲ್ಪಹಣವನ್ನು ಸಮಾಜಕ್ಕೆ ವಿನಿಯೋಗಿಸುವ' ಕೊಟ್ರಪ್ಪನವರ ದಾನ ಮನೊಭಾವವನ್ನು ಗದುಗಿನ ತೋಂಟದಾರ್ಯ ಮಠದ ಡಾ.ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು ಮುಕ್ತಕಂಠದಿಂದ ಶ್ಲಾಘಿಸಿದ್ದರು.

ಅಕ್ಕಿ ಕೊಟ್ರಪ್ಪನವರ ಗುಣವನ್ನು ಅಪಾರವಾಗಿ ಮೆಚ್ಚಿಕೊಂಡ



ಗದುಗಿನ ಶ್ರೀಗಳು, ತಮ್ಮ ಶ್ರೀಮಠಕ್ಕೆ ಸೇರಿದ ಹದಿನಾಲ್ಕು ಎಕರೆ ಹೊಲದ ಸಂಪೂರ್ಣ ಉಸ್ತುವಾರಿಯನ್ನು ಇವರಿಗೆ ನೀಡಿದರು. ಮೊದ ಮೊದಲಿಗೆ ಪ್ರತಿವರ್ಷ ಹಣವನ್ನು ಮಠಕ್ಕೆ ತಲುಪಿಸುತ್ತಿದ್ದರು. ಆದರೆ ಕೆಲ ವರ್ಷಗಳ ನಂತರ ಪೂಜ್ಯರು "ಈ ಜಮೀನಿನಿಂದ ಬರುತ್ತಿರುವ ಹಣವನ್ನು ಮಠಕ್ಕೆ ತಲುಪಿಸುವುದ ಬೇಡ, ಅಲ್ಲಿಯೇ ಸಂಗ್ರಹವಾಗಿರಲಿ" ಎಂದು ಸೂಚಿಸಿದರು. ಅದರಂತೆ ಕಳೆದ 15-16 ವರ್ಷಗಳಿಂದ ಕೊಟ್ರಪ್ಪನವರು ತಂಬ್ರಹಳ್ಳಿಯಲ್ಲಿ, ಗದುಗಿನ ಶ್ರೀಗಳ -ಹೆಸರಿನಲ್ಲಿ ಪೈಸೆ ಪೈಸೆಯೂ ವ್ಯತ್ಯಾಸವಾಗದ ರೀತಿಯಲ್ಲಿ ಹಣ ಜಮಾ ಮಾಡುತ್ತಿರುವ ಅವರ ಗುಣವನ್ನು ಎಷ್ಟು ಹೊಗಳಿದರೂ ಸಾಲದು. ಇವರೇ ಹೆಚ್ಚು ಮುತುವರ್ಜಿ ವಹಿಸಿ ಆ ಜಮೀನಿಗೆ ನೀರಾವರಿ ವ್ಯವಸ್ಥೆ, ಬೇಲಿ ಹಾಕಿಸಿದರು. ಇದರಿಂದ ಮಠಕ್ಕೆ ಹೆಚ್ಚಿನ ಆದಾಯ ಬರುವಂತಾಯಿತು. ಪ್ರಸ್ತುತ ಹೊಲದ ಆದಾಯ ಪ್ರತಿ ವರ್ಷ ರೂ 1.5ಲಕ್ಷದಷ್ಟು ಬರುತ್ತಿದೆ ಎಂದರೆ ಅದು ಕೊಟ್ಟಪ್ಪನವರ ಸಾಮಾಜಿಕ ಕಳಕಳಿ ಮತ್ತು ಪಾರದರ್ಶಕ ವ್ಯಕ್ತಿತ್ವವನ್ನು ತೋರಿಸುತ್ತದೆ. ಗದುಗಿನ ಶ್ರೀಗಳು "ಸಾರ್ವಜನಿಕವಾಗಿ ಬರುವ ಹಣದ ಒಂದು ರೂಪಾಯಿಯೂ ವ್ಯಯವಾಗ ಬಾರದು" ಎನ್ನುವ ಮಾತನ್ನು ಕೊಟ್ರಪ್ಪನವರು ಅಕ್ಷರಸಹ ಜಾರಿಗೆ ತಂದಿದ್ದಾರೆ.

ಅಕ್ಕಿ ಕೊಟ್ರಪ್ಪನವರಿಗೆ ಶಿಕ್ಷಣದ ಬಗ್ಗೆ ಅಪಾರ ಪ್ರೀತಿ. ತಾವು ಹೆಚ್ಚು ಓದದಿದ್ದರೂ ತಮ್ಮ ಭಾಗದ ಮಕ್ಕಳು ಅದರಿಂದ ವಂಚಿತರಾಗಬಾರದು ಎನ್ನುವ ಅಭಿಲಾಷೆ ಅಧಿಕವಾಯಿತು. ಅದಕ್ಕೆ ತಮ್ಮ ಊರಿನ ದಾನಿಗಳ ಮನ ಒಲಿಸಿ ಬಳ್ಳಾರಿ ವಿವಿ ಸಂಘಕ್ಕೆ ದಾನ ನೀಡಲು ಪ್ರೇರೇಪಣೆ ನೀಡಿದರು. ಅದರ ಫಲವಾಗಿ ಪ್ರೌಢಶಾಲೆ (ಕಿನ್ನಾಳ ಪೂರಮ್ಮಾಂಬೆ ಗುರುಸಿದ್ಧಪ್ಪ ಪ್ರೌಢಶಾಲೆ)ಆರಂಭವಾಗಿ ಮಕ್ಕಳ ಮನದಲ್ಲಿ ಓದಿನ ಆಸಕ್ತಿಯನ್ನು ಹೆಚ್ಚಿಸಿತು. ಆದರೆ ಆ ಸಂತಸ ಅವರಿಗೆ ಕೆಲವು ವರ್ಷ ಮಾತ್ರ ದೊರಕಿತು. ಹೈಸ್ಕೂಲ್ ನಂತರ ಪಿಯುಸಿಗಾಗಿ ಮಕ್ಕಳು ಹ.ಬೊ.ಹಳ್ಳಿಗೆ ಬರಲು ಪರದಾಡುತ್ತಿದ್ದರು. ಅದನ್ನು ನೋಡಿದ ಇವರ ಕರುಳು ಚುರುಕ್ ಎಂದಿತು. ತಕ್ಷಣವೇ ಮತ್ತೆ ವಿವಿ ಸಂಘಕ್ಕೆ ತಾವೇ ಸ್ವತಃ ಜಮೀನು ಮತ್ತು ಹಣವನ್ನು ನೀಡುವ ಮೂಲಕ ಪಿಯು ಕಾಲೇಜು ಪ್ರಾರಂಭಕ್ಕೆ ಕಾರಣರಾದರು. ತಂಬ್ರಹಳ್ಳಿಯುಂತಹ ಗ್ರಾಮೀಣ ಪ್ರದೇಶದಲ್ಲಿ 'ಅಕ್ಕಿ ಬಸಮ್ಮ ತೋಟಪ್ಪ ಸ್ಮಾರಕ ಪಿ.ಯು.ಕಾಲೇಜು' ಸ್ಥಾಪಿಸಿದ್ದು ಅವರ ದೂರದರ್ಶಿತ್ವಕ್ಕೆ ಸಾಕ್ಷಿಯಾಗಿದೆ. ಅಲ್ಲಿಗೆ ಅವರ ಕನಸು ಕೊನೆಗೊಂಡಿಲ್ಲ. ಪದವಿ ಕಾಲೇಜು, ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸುವ ಮುಖಾಂತರ ಗ್ರಾಮೀಣ ಪ್ರತಿಬೆಗಳಿಗೆ ಅವಕಾಶ ಒದಗಿಸಲು ಶ್ರಮಿಸುತ್ತಲೇ ಇದ್ದಾರೆ. ಅವರ ಶಿಕ್ಷಣ ಪರ ಕಾಳಜಿ ನಿಜವಾಗಿಯೂ ಅವರ ವ್ಯಕ್ತಿತ್ವದ ಗೌರವವನ್ನು ಇಮ್ಮಡಿಗೊಳಿಸಿದೆ.

ಅಕ್ಕಿ ಕೊಟ್ರಪ್ಪನವರಿಗೆ ಮೊದಲಿಂದಲು ದೈವ ಭಕ್ತಿ ಅಧಿಕವಾಗಿತ್ತು. ತಮ್ಮ ಹೆಸರಿನಲ್ಲಿರುವ ಕೊಟ್ರೇಶನು ಅವರ ಮನವನ್ನು ಸಂಪುರ್ಣವಾಗಿ ಅಲಂಕರಿಸಿದ್ದನು. ಅದಕ್ಕೆ ತಂಬ್ರಹಳ್ಳಿಯಲ್ಲಿ ಕೊಟ್ಟೂರೇಶ್ವರ ದೇವಸ್ಥಾನ ನಿರ್ಮಿಸಲು ಯೋಚಿಸಿದರು. ಅದಕ್ಕೆ ತಾವೇ ಸ್ವಂತವಾಗಿ 15ಲಕ್ಷ ರುಪಾಯಿಗಳಿಗಿಂತ ಹೆಚ್ಚಿನ ಹಣ ಖರ್ಚು ಮಾಡಿ ನಿರ್ಮಿಸಿದ್ದಾರೆ. ಇಂದು ಅದು ಊರಿನ ಸಮಸ್ತರೂ ಪೂಜಿಸುತ್ತ ಅನೇಕ ಕಾರ್ಯಕ್ರಮಗಳು ನಡೆಯುವ ಮುಖ್ಯ ಕೇಂದ್ರವಾಗಿದೆ. ಅದರ ಜೊತೆಗೆ ಊರಿನ ಇತರೆ ಎಲ್ಲಾ ದೇವಸ್ಥಾನಗಳ ನಿರ್ಮಾಣ, ಜೀರ್ಣೋದ್ಧಾರ, ರಥ ನಿರ್ಮಾಣ ಇಂತಹ ಯಾವುದೇ ಧಾರ್ಮಿಕ ಕೆಲಸಗಳಿದ್ದಲ್ಲಿ ಅದರ ನೇತೃತ್ವ ವಹಿಸಿಕೊಳ್ಳಲು ಕೊಟ್ರಪ್ಪನವರು ಎಂದಿಗೂ ಹಿಂದು ಮುಂದು ನೋಡಿದವರಲ್ಲ. ಇವರು ಜವಬ್ದಾರಿ ತೆಗೆದುಕೊಂಡರೆ ಅ ಕೆಲಸ ಪುರ್ಣವಾಗುತ್ತದೆ ಎನ್ನುವ ಬಲವಾದ ನಂಬಿಕೆ ಊರಿನವರಲ್ಲಿ ಮನ ಮಾಡಿದೆ. ಹಾಗೆಂದು ಅಂತಹ ಕೆಲಸಗಳನ್ನು ಎಂದೂ ಇವರು ಏಕಪಕ್ಷೀಯವಾಗಿ ನಿರ್ಧಾರ ಮಾಡಿದವರಲ್ಲ. ಗ್ರಾಮದ ಸರ್ವರೂ ಅದರಲ್ಲಿ ಒಳಗೊಳ್ಳಬೇಕು. ಒಂದು ರುಪಾಯಿ ದಾನ ಕೊಟ್ಟರೂ ಇವರು ಗೌರವದಿಂದ ಅದನ್ನು ಸ್ವೀಕರಿಸುತ್ತಾ ಧಾರ್ಮಿಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಮಾಡಿದ್ದಾರೆ. ಬಹುತೇಕ ಕೆಲಸಗಳಲ್ಲಿ ಅತಿ ಹೆಚ್ಚು ಹಣ ಇವರೇ ಕೈಯಿಂದ ಹಾಕಿದರೂ ತಾವು ದಾನ ನೀಡಿದ್ದೇನೆ ಎಂದೂ ಉಬ್ಬಲಿಲ್ಲ. ದಾನ ನೀಡಿದ್ದು ಒಂದು ಕೈಗೆ ಗೊತ್ತಾದರೆ ಇನ್ನೊಂದು ಕೈಗೆ ತಿಳಿಯಬಾರದು ಎನ್ನುವಂತೆ ಮತ್ತು ಬಸವಣ್ಣನವರ ವಚನದಂತೆ ". . . . .ಮಾಡಿದೆನೆಂಬುದು ಮನದಲ್ಲಿ ಹೊಳೆದರೆ ಏಡಿಸಿ ಕಾಡಿತ್ತು ಶಿವನ ಢಂಗುರ. . . ." ಎನ್ನುವುದನ್ನು ಸದಾ ಪರಿಪಾಲಿಸುತ್ತಿರುವುದು ಇವರ ಹೆಗ್ಗಳಿಗೆ.

ಅಕ್ಕಿ ಕೊಟ್ಟಪ್ಪನವರಿಗೆ ನಾಲ್ಕು ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು. ಅವಿಭಕ್ತ ಕುಟುಂಬದಂತಿರುವ ಈ ಕುಟುಂಬದವರು ತಮ್ಮ ತಮ್ಮ ಉದ್ಯೋಗಗಳಲ್ಲಿ ಸಾಕಷ್ಟು ಯಶಸ್ಸನ್ನು ಗಳಿಸಿದ್ದಾರೆ. ಆದಾಗ್ಯೂ ಮಕ್ಕಳೆಲ್ಲರೂ ತಮ್ಮ ತಂದೆಯ ಮಾತಿಗೆ ಎಂದೂ ಇಲ್ಲವೆನ್ನದಂತೆ ಗೌರವದಿಂದ ಕಾಣುತ್ತಿದ್ದಾರೆ. ಅದಕ್ಕೆ ಪೂರಕ ಎನ್ನುವಂತೆ ಕೊಟ್ರಪ್ಪನವರು ತಮ್ಮ ಕುಟುಂಬದ ಆದಾಯದಲ್ಲಿ ಒಂದು ಟ್ರಸ್ಟ್ ಮಾಡಲು ಯೋಚಿಸಿ, ಗದುಗಿನ ಶ್ರೀಗಳ ಅಪ್ಪಣೆ ಪಡೆದರು. ಅದರ ಅಂಗವಾಗಿ "ಶ್ರೀಮತಿ ಅಕ್ಕಿ ಬಸಮ್ಮ ತೋಟಪ್ಪ ಪಬ್ಲಿಕ್ ಚಾರಿಟೇಬಲ್ ಟ್ರಸ್ಟ್" ಪ್ರಾರಂಭವಾಯಿತು. ಅದರ ಗೌರವ ಅಧ್ಯಕ್ಷರಾಗಿ ಗದುಗಿನ ಅಜ್ಜನವರನ್ನೇ ಮಾಡಿದ್ದಾರೆ. ಕೊಟ್ರಪ್ಪನವರು ಅದರ ಅಧ್ಯಕ್ಷರಾಗಿ, ಆ ಟ್ರಸ್ಟ್ ಮುಖಾಂತರ ಅನೇಕ ಜನರಿಗೆ ಉಪಯೋಗವಾಗುವ ಅಂದರೆ ಕ್ರೀಡಾಕೂಟಗಳು, ಉಚಿತ ನೇತ್ರ ಚಿಕಿತ್ಸಾ ಶಿಬಿರಗಳು, ವಿಜ್ಞಾನ ಶಿಕ್ಷಕರಿಗೆ ತರಬೇತಿ ಶಿಬಿರ, ಸಾಹಸ ಮತ್ತು ಪ್ರಕೃತಿ ಪ್ರೇಮ ಬೆಳೆಸುವ ಶಿಬಿರ, ಸರಕಾರಿ ಶಾಲಾ ಮಕ್ಕಳಿಗೆ ಉಚಿತವಾಗಿ ನೋಟ್ ಬುಕ್ ವಿತರಣೆ ಹೀಗೆ ಅನೇಕ ಮತ್ತು ವೈವಿಧ್ಯಮಯ ಹತ್ತು ಹಲವು ಕಾರ್ಯಕ್ರಮಗಳನ್ನು ತಾಲೂಕಿನ ವಿವಿಧ ಕಡೆಗಳಲ್ಲಿ ಆಯೋಜಿಸಿದ್ದಾರೆ. ಬಹಳ ವಿಶೇಷ ಎಂದರೆ ಈ ಟ್ರಸ್ಟ್‌ನಲ್ಲಿ ಹಣ ಇಡುವ ವಿಧಾನ, ಬಳಸುವಾಗ ಸಾರ್ವಜನಿಕ ದತ್ತಿನಿಧಿ ಮತ್ತು ಧಾರ್ಮಿಕ ದತ್ತಿನಿಧಿಯೆಂದು ವಿಭಾಗಿಸಿ, ಅಲ್ಲಿ ಬರುವ ಬಡ್ಡಿ ಹಣವನ್ನು ಸಾರ್ವಜನಿಕ ಉಪಯೋಗಿಸುತ್ತಿರುವುದೆಲ್ಲವನ್ನು ಕೇಳಿದಾಗ ಒಂದು ರೀತಿ ಅಚ್ಚರಿ ಜೊತೆಗೆ ಅಕ್ಕಿ ಕೊಟ್ರಪ್ಪನರಿಗೆ ಇರುವ ಸಾಮಾಜಿಕ ಬದ್ಧತೆಯನ್ನು ಕಾಣಬಹುದಾಗಿದೆ.

ಅಕ್ಕಿ ಕೊಟ್ಟಪ್ಪನವರು ತಮ್ಮ ಕೆಲಸ ಮತ್ತು ಮನೆಗೆ ಮಾತ್ರ ಸೀಮಿತವಾಗಿದ್ದರೆ ಇಂದು ಅವರ ಬಗ್ಗೆ ಮಾತನಾಡುವ-ಬರೆಯುವ ಅಗತ್ಯವೇ ಇರಲಿಲ್ಲ. ಆದರೆ ಆ ಎಲ್ಲಾ ಜವಾಬ್ದಾರಿಗಳನ್ನು ಅರ್ಥಪೂರ್ಣವಾಗಿ ನಿಭಾಯಿಸಿ, ಅದನ್ನು ಮೀರಿ ಸಾಮಾಜಿಕ ಕೆಲಸಗಳ ಮೂಲಕವೇ ಎಲ್ಲರ ಗಮನ ಸೆಳೆದು ಇತರರಿಗೆ ಮಾದರಿಯಾಗಿದ್ದಾರೆ. ಶರಣರಂತೆ ಅತ್ಯಂತ ಸರಳ ಮತ್ತು ಸಜ್ಜನಿಕೆಯ ಜೀವನ ನಡೆಸುತ್ತಾ, ಗ್ರಾಮೀಣ ಪ್ರದೇಶವನ್ನೇ ಅಪ್ಪಿಕೊಂಡಿದ್ದಾರೆ. ಬಹಳ ವಿಶೇಷ ಎಂದರೆ ತಾವಷ್ಟೆ ಬೆಳೆಯದೇ, ತಮ್ಮ ಜೊತೆ ಊರನ್ನೂ ಬೆಳೆಸಿದ್ದಾರೆ. ಇಂತವರ ಸಂಖ್ಯೆ ಎಲ್ಲ ಕಡೆಯಲ್ಲಿಯೂ ಹೆಚ್ಚಾಗಬೇಕು. ನಮ್ಮ ಭಾಗದ ದಾನ ಚಿಂತಾಮಣಿಯಾದ ಅಕ್ಕಿ ಕೊಟ್ರಪ್ಪನವರು 92 ವಯಸ್ಸಿನ ಅತ್ಯಂತ ತುಂಬು ಜೀವನವನ್ನು ನೆಡೆಸಿ ಮೊನ್ನೆ ಜುಲೈ 27, 2024ರಂದು ಇಹ ಲೋಕದ ಯಾತ್ರೆಯನ್ನು ಮುಗಿಸಿದರು. ಆದರೆ ಅವರು ಹಾಕಿಕೊಟ್ಟ ಹಾದಿ, ಬಿಟ್ಟು ಹೋಗಿರುವ ಆದರ್ಶಗಳು ಸದಾ ಜೀವಂತ. .ಜೀವಂತ...

## ಕವಿ ಮನಸು

### ಮಳೆಯ ಅವಾಂತರ


ಮಳೆಯಿಲ್ಲದೆ ಪರಿತಪಿಸಿದ ದಿನ
ಮಳೆಗಾಗಿ ಆತುವರೆದ ದಿನ
ಆಗಸದಿ ಮೋಡ ಕಾಣದ ದಿನ
ಜನರ ಕಣ್ಣೀರ ಒರಸದ ದಿನ
ಬರಲಿಲ್ಲ ಮಳೆರಾಯ ಆ ದಿನ

ಬಿಡದೆ ಸುರಿಯುವೆ ಈ ದಿನ
ಭೂತಾಯಿಗೆ ಸಂತಸದಈ ದಿನ
ಹಳ್ಳಕೊಳ್ಳ ತುಂಬಿದ ಈ ದಿನ
ರೈತರಲ್ಲಿ ಹರುಷ ತಂದ ಈ ದಿನ
ಸುರಿದೆ .. ಮಳೆರಾಯ ಈ ದಿನ

ಅತಿವೃಷ್ಟಿಗೆ ನಲುಗಿದೆ ನೋಡು
ವಸತಿಯಿಲ್ಲದವರ ನೋಡು
ಬೆಳೆ ಕೊಚ್ಚಿಹೋಗಿದ್ದು ನೋಡು
ನೆಲವೇ ಜಲವಾಯಿತು ನೋಡು
ಸಾಕು ಮಾಡು ಮಳೆರಾಯ
ನಿನ್ನ........ಅವಾಂತರ

– ಜಿ ಆರ್ ಬಸವರಾಜೇಶ್ವರಿ
ಸರ್ಕಾರಿ ಪ್ರೌಢಶಾಲೆ, ಹಗರಿ ಗಜಾಪುರ

### ಓಟ




ಓಡು ಓಡು ಓಡು ಓಡು ಓಡು
ಹಣದ ಹಿಂದೆ ಓಡುವವರ ಓಟ ನೋಡು
ಅಂತ್ಯವಿಲ್ಲ ಆದಿ ಇಲ್ಲ ಇವರ ಓಟಕೆ
ಓಡಿ ಓಡಿ ಬಿದ್ದರಣ್ಣ ದೊಡ್ಡ ಹಳ್ಳಕೆ

ಧನವೊಂದೇ ದೇವರೆಂದು ತಿಳಿದವರು
ಆದಕಾಗಿ ತನುವನೆಲ್ಲ ತೇಯುತಿರುವರು
ದಾನ ಧರ್ಮ ಎಲ್ಲವನ್ನು ತಾವು ಮರೆತರು
ಮಾನವ ಸಂಭಂದಗಳ ತೊರೆದು ಬಿಟ್ಟರು

ಓಟ ಅವರದೆಲ್ಲಿವರೆಗೆ ಅವಗೆ ತಿಳಿಯದು
ಆಟ ಮುಗಿದ ಮೇಲೆ ಹಿನ್ನೋಟ ಕಾಣದು
ಇಳೆಯ ಬಿಟ್ಟು ಹೋಗುವಾಗ ಏನು
ಒಯ್ದರು
ಒಯ್ವೆನೆಂದರೂ ಬಿಡರು ನಿನ್ನ ಪ್ರಿತಿ ಪಾತ್ರರು

ಆಸೆ ಎಂಬ ಬಿಸಿಲುಗುದುರೆ ಏರಿ ಹೊರಟರು
ನಿರಾಸೆಗಳ ಭವಸಾಗರದಿ ಮುಳುಗಿ
ಹೋದರು
ಯಾತಕಿದು ಭಂಡ ಬಾಳುವೆ ಅಂತ ಅಂದರು
ಎಲ್ಲ ತಿಳಿಯುವಷ್ಟರಲ್ಲಿ ಬದುಕು
ಅಂತ್ಯವಾದರು

– ಕೆ ಎಂ ಬಸವರಾಜ ಹೊಸಪೇಟೆ

### ಪ್ರವಾಹ

ಬಿಸಿಲ ಝಳಕೆ ಬಳಲಿ
ಮೊರೆಯಿಟ್ಟೆವು ಮಳೆ ಬರಲಿ
ಪ್ರಾರ್ಥನೆಯು ಅತಿಯಾಗಿ
ಬರುತಿದೆ ಮಳೆ ಬಿರುಸಾಗಿ

ಕೆರೆ ಹಳ್ಳಕೊಳ್ಳಗಳು ತುಂಬಿ
ಹರಿದಿದೆ ನದಿಯು ಮೈದುಂಬಿ
ಎದುರಾಗಿದೆ ಪ್ರವಾಹ ಭೀತಿ
ತಂದಿದೆ ಬಹಳ ಫಜೀತಿ

ಕುಸಿದಿದೆ ಬೆಟ್ಟದ ಗುಡ್ಡಗಳು
ಉರುಳಿದೆ ಗಿಡ ಮರಗಳು
ಸುರಿದಿದೆ ಬಾರಿ ಮಳೆಯು
ಹಾಳಾಗುತ್ತಿದೆ ರೈತರ ಬೆಳೆಯು

ಮುಳುಗಿತು ಇದ್ದ ನೆಲೆ
ನಡೆದಿದೆ ಜನರ ಗುಳೆ
ಕವಿದಿದೆ ಪ್ರಾಣದ ಭಯವು
ಕತ್ತಲು ತಂದಿದೆ ಪ್ರವಾಹವು

– ಚೇತನ ಭಾರ್ಗವ
ಬೆಂಗಳೂರು

# ವಿದ್ವತ್, ಹಸ್ತಪ್ರತಿ ತಜ್ಞ ಡಾ.ಕೆ. ರವೀಂದ್ರನಾಥ



**ಪರಿಚಯ:** ಡಾ. ಕೆ. ರವೀಂದ್ರನಾಥ ಅವರು ವಿಜಯನಗರ ಜಿಲ್ಲೆ ಕೊಟ್ಟೂರು ತಾಲೂಕಿನ ಅಂಬಳಿಯಲ್ಲಿ ಕೃಷಿ ಕುಟುಂಬದಲ್ಲಿ ಜನಿಸಿದರು. ಅಂಬಳಿ ಮತ್ತು ಕೊಟ್ಟೂರಿನಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಪೂರೈಸಿ ಮುಂದೆ ಪ್ರತಿಷ್ಠಿತ ವೀರಶೈವ ವಿದ್ಯಾವರ್ಧಕ ಸಂಘದ ಹೊಸಪೇಟೆಯ ವಿಜಯನಗರ ಮಹಾವಿದ್ಯಾಲಯದಲ್ಲಿ ಬಿ.ಎ.ಪದವಿಯನ್ನು 1988ರಲ್ಲಿ ಪ್ರೊ. ಎಂ.ಮರಿಯಪ್ಪಭಟ್ಟ ಅವರ ಪ್ರಶಸ್ತಿಯೊಂದಿಗೆ ಪ್ರಥಮ ಶ್ರೇಣಿಯಲ್ಲಿ ಪಾಸಾದರು. ಮುಂದೆ ಗುಲಬರ್ಗಾ ವಿಶ್ವವಿದ್ಯಾಲಯದಿಂದ ಎಂ.ಎ.ಕನ್ನಡ ಪದವಿಯನ್ನು 1990ರಲ್ಲಿ ಡಾ.ಅನುಪಮ ನಿರಂಜನ, ಡಾ.ಪಾಂಡುರಂಗರಾವ್ ದೇಶಮುಖ ಮತ್ತು ಸ್ಟೇಟ್ ಬ್ಯಾಂಕ್ ಆಫ್ ಹೈದ್ರಾಬಾದ್ ಹೆಸರಿನ ಮೂರು ಚಿನ್ನದ ಪದಕಗಳೊಂದಿಗೆ ಪ್ರಥಮ ರ‍್ಯಾಂಕಿನಲ್ಲಿ ಉತ್ತೀರ್ಣರಾದರು. 'ಕನ್ನಡ ಸಾಹಿತ್ಯಕ್ಕೆ ಮಠ ಮಾನ್ಯಗಳ ಸೇವೆ' ಎಂಬ ಮಹಾಪ್ರಬಂಧವನ್ನು ಡಾ.ಮೃತ್ಯುಂಜಯ ಹೊರಕೇರಿಯವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಗುಲಬರ್ಗಾ ವಿಶ್ವವಿದ್ಯಾಲಯದಿಂದ 1996ರಲ್ಲಿ ಡಾಕ್ಟರೇಟ್ ಪದವಿ ಪಡೆದರು.

1997 ರಿಂದ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ, ಸಹಪ್ರಾಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ ಹಾಗೂ ಮುಖ್ಯಸ್ಥರಾಗಿ ಕಳೆದ 30 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಕನ್ನಡ ವಿಶ್ವವಿದ್ಯಾಲಯದ ಆಶಯವಾದ ವಿದ್ಯೆಯನ್ನು ಸೃಷ್ಟಿಸುವ ನಿಟ್ಟಿನಲ್ಲಿ ಕ್ರಿಯಾಶೀಲರಾಗಿ ದುಡಿದಿದ್ದಾರೆ. ಆ ಮೂಲಕ ಹಸ್ತಪ್ರತಿಗಳ ಸರ್ವೇಕ್ಷಣೆ, ಸಂಗ್ರಹ, ಸಂರಕ್ಷಣೆ ಹಾಗೂ ಪ್ರಕಟಣೆಯ ನೆಲೆಯಲ್ಲಿ ಕನ್ನಡ ಸಾಹಿತ್ಯ ಚರಿತ್ರೆಗೆ ಹೊಸದಾಗಿ ಕವಿಗಳನ್ನು, ಕೃತಿಗಳನ್ನು ಸೇರಿಸಿದ್ದಾರೆ. 25ಕ್ಕೂ ಹೆಚ್ಚು ಕೃತಿಗಳನ್ನು ಗ್ರಂಥಸಂಪಾದನೆಯ ವೈಧಾನಿಕತೆಯ ಹಿನ್ನೆಲೆಯಲ್ಲಿ ಪರಿಷ್ಕರಿಸಿ ಕೊಟ್ಟಿದ್ದಾರೆ. ಸಂಶೋಧನಾತ್ಮಕವಾಗಿ 15ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಶೈಕ್ಷಣಿಕ, ಸಾಹಿತ್ಯಕ ಹಾಗೂ ಸಾಂಸ್ಕೃತಿಕವಾಗಿ ತಮ್ಮದೇ ಆದ ಹೆಜ್ಜೆ ಗುರುತುಗಳನ್ನು ಮೂಡಿಸಿರುವ ಡಾ.ಕೆ.ರವೀಂದ್ರನಾಥ ಅವರು ಹಳಗನ್ನಡ, ನಡುಗನ್ನಡ, ವಚನಸಾಹಿತ್ಯ, ಶಾಸನಸಾಹಿತ್ಯ, ದಾಖಲು ಸಾಹಿತ್ಯ, ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನ ಶಾಸ್ತ್ರಗಳಲ್ಲಿ ವಿಶೇಷ ಆಸಕ್ತಿ ಹೊಂದಿದ್ದಾರೆ. ಇದರ ಪರಿಣಾಮವಾಗಿ ಸಂಶೋಧನೆ, ಸಂಪಾದನೆ, ಗ್ರಂಥಸಂಪಾದನೆ, ಜೀವನ ಚರಿತ್ರೆ, ವಿಮರ್ಶೆ, ಅಭಿನಂದನ ಗ್ರಂಥಗಳು ಸೇರಿ ಇದುವರೆಗೆ 70ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ.

ಆಡಳಿತಾತ್ಮಕವಾಗಿ ಕನ್ನಡ ವಿಶ್ವವಿದ್ಯಾಲಯದ ಶೈಕ್ಷಣಿಕ ಉಪಕುಲಸಚಿವರಾಗಿ, ಅಧ್ಯಯನಾಂಗ (ಪರೀಕ್ಷಾಂಗದ) ನಿರ್ದೇಶಕರಾಗಿ, ಲಲಿತಕಲಾ ನಿಕಾಯದ ಡೀನ್‌ರಾಗಿ, ಎಂ.ಎ. ಪಿಎಚ್.ಡಿ (ಕನ್ನಡ) ಸಂಯೋಜಿತ ಪದವಿಯ ಸಂಚಾಲಕರಾಗಿ, ಸಿಂಡಿಕೇಟ್ ಸದಸ್ಯರಾಗಿ, ಕರ್ನಾಟಕ ಸರಕಾರದ ರಾಷ್ಟ್ರೀಯ ನೂತನ ಶಿಕ್ಷಣ ನೀತಿಯ ಕನ್ನಡ ವಿಷಯತಜ್ಞ ರಾಜ್ಯ ಸಮಿತಿಯ ಸದಸ್ಯರಾಗಿ, ದೃಶ್ಯಕಲಾ ವಿಭಾಗದ ಮುಖ್ಯಸ್ಥರಾಗಿ ಕೂಡಲಸಂಗಮ ಅಂತಾರಾಷ್ಟ್ರೀಯ ವಚನ ಅಧ್ಯಯನಕೇಂದ್ರದ ಮೊದಲ ಮುಖ್ಯಸ್ಥರಾಗಿ, ಹಸ್ತಪ್ರತಿಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ, ಶಂಬಾ ಜೋಶಿ, ಪುರಂದರದಾಸ, ಜೈನ ಪೀಠಗಳ ಸಂಚಾಲಕರಾಗಿ ಕಾರ್ಯನಿರ್ವಹಿಸಿ ಅಪಾರ ಆಡಳಿತಾತ್ಮಕ ಅನುಭವವನ್ನು ಹೊಂದಿದ್ದಾರೆ.

**ಪ್ರಶಸ್ತಿಗಳು:**
ಇವರ ಸಾಧನೆಯನ್ನು ಪರಿಗಣಿಸಿ ಕನ್ನಡ ಪುಸ್ತಕ ಪ್ರಾಧಿಕಾರದ ಪುಸ್ತಕ ಸೊಗಡು ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುಸ್ತಕ ಬಹುಮಾನ, ಸುತ್ತೂರು ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ, ಕನಕಪುರದ ವಚನಸಾಹಿತ್ಯ ಪುರಸ್ಕಾರ, ಗುಲಬರ್ಗಾ ವಿಶ್ವವಿದ್ಯಾಲಯದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಅಖಿಲ ಭಾರತ ಶರಣಸಾಹಿತ್ಯ ಪರಿಷತ್ತಿನ ರಮಣಶ್ರೀ ಪ್ರಶಸ್ತಿ, ಬಸವಕಲ್ಯಾಣದ ಉರಿಲಿಂಗಪೆದ್ದಿ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ಜಯಲಕ್ಷಮ್ಮ ಬಿ.ಎಸ್.ಸಣ್ಣಯ್ಯ ದತ್ತಿನಿಧಿ ಪ್ರಶಸ್ತಿ, ಕರ್ನಾಟಕ ಇತಿಹಾಸ ಅಕಾಡೆಮಿಯ ಸಂಶೋಧನಶ್ರೀ ಮತ್ತು ಬಿ.ಎಸ್. ಸಣ್ಣಯ್ಯ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ. ಕನ್ನಡ ವಿಶ್ವವಿದ್ಯಾಲಯದಲ್ಲಿ ಮೂರು ದಶಕಗಳ ಸೇವೆ ಸಲ್ಲಿಸಿದ್ದಾರೆ.

**ಸಂಶೋಧನ ಕೃತಿಗಳು:**
'ಮಾನ್ಯ' 1997ರಲ್ಲಿ ಪ್ರಕಟಗೊಂಡ ಶ್ರೀಯುತರ ಚೊಚ್ಚಲ ಕೃತಿ. ಲೇಖಕರು ಬೇರೆ ಬೇರೆ ಸಂದರ್ಭಗಳಲ್ಲಿ ಬರೆದು ವಿಚಾರ ಸಂಕಿರಣಗಳಲ್ಲಿ ಮಂಡಿಸಿದ 15 ಸಂಲೇಖನಗಳ ಸಂಕಲನ ಕೃತಿ. ಪ್ರಾಚೀನದಿಂದ ಆರ್ವಾಚೀನದವರೆಗೆ ಹರಡಿಕೊಂಡ ಇಲ್ಲಿನ ಚಿಂತನೆಗಳಲ್ಲಿ ಕ್ಷೇತ್ರಕಾರ್ಯದ ಮೂಲಕ ವಿಷಯ ವೈವಿಧ್ಯತೆ ಧಾರಾಳವಾಗಿದೆ. ಪ್ರಾಚೀನ ಸಾಹಿತ್ಯದಲ್ಲಿ ನಿರೂಪಿತಗೊಂಡ ಬಾಹುಬಲಿ, ಅಕ್ಕಮಹಾದೇವಿ, ಸಾಕ್ಷರತೆ, ಚಾಮರಸ ವಿಷಯಗಳನ್ನೊಳಗೊಂಡಂತೆ ಆರಂಭವಾದ ಸಮೀಕ್ಷೆ ಬಳ್ಳಾರಿ ಜಿಲ್ಲೆಯ ಸ್ವಾತಂತ್ರ ಹೋರಾಟಗಾರ ರವರೆಗೂ ಮುಂದುವರಿದಿದೆ. ಒಟ್ಟಿನಲ್ಲಿ ಕರ್ನಾಟಕ ಸಂಸ್ಕೃತಿಯ ಬಹುಮುಖ್ಯ ಸಂಗತಿಹಳನ್ನು ಇಲ್ಲಿಯ ಲೇಖನಗಳು ಪ್ರತಿನಿಧಿಸುತ್ತವೆ.

"ಕನ್ನಡ ದಾಖಲುಸಾಹಿತ್ಯ" ಎಂಬ ಯೋಜನೆಯಲ್ಲಿ ನಾಡಿನ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ನಿರೂಪಿಸಲು ಬೇಕಾದ ಶಾಸನ, ಕಡತ, ಭಿನ್ನವತ್ತಳೆ, ಬಖೈರು, ನಿರೂಪ, ದಿನಚರಿ, ನಾಮೆ, ಸ್ಥಳಮಹಾತ್ಮ, ವಂಶಾವಳಿಗಳನ್ನು ಕುರಿತಂತೆ ಅವುಗಳ ಅರ್ಥ, ಲಕ್ಷಣ. ಸ್ವರೂಪ ಮತ್ತು ಮಹತ್ವವನ್ನು ವಿವರಿಸಲಾಗಿದೆ. 250 ವರ್ಷಗಳ ಅಧ್ಯಯನದ ಇತಿಹಾಸವಿರುವ ದಾಖಲೆಗಳನ್ನು ಕುರಿತು ಅಧಿಕೃತವಾಗಿ ವಿವರಿಸುವ ಸಂಶೋಧನ ಯೋಜನೆಯಾಗಿದೆ.

'ಅಗ್ನಿದಿವ್ಯ' ವಿವಿಧ ವಿಚಾರಗೋಷ್ಠಿಗಳಲ್ಲಿ ಮಂಡಿಸಿದ 15 ಸಂಶೋಧನ ಲೇಖನಗಳ ಸಂಕಲನ. ಪ್ರಸ್ತುತ ಕೃತಿಯಲ್ಲಿ ಬಳ್ಳಾರಿ ಜಿಲ್ಲೆಯ ಜೈನಕೇಂದ್ರಗಳು, ಹಸ್ತಪ್ರತಿ ಸಂಪತ್ತು, ಹಗರಿಬೊಮ್ಮನಹಳ್ಳಿ ತಾಲೂಕಿನ ಸ್ಥಳನಾಮಗಳು, ಹಂಪಿ ವೀರಶೈವ ಮಠಗಳು ಮತ್ತು ಕನ್ನಡ ಸಾಹಿತ್ಯ, ಕಂಪ್ಲಿ ಮತ್ತು ಸಾಹಿತ್ಯ, ಕೊಪ್ಪಳದ ಎರಡು ಅಪ್ರಕಟಿತ ತಾಮ್ರಶಾಸನಗಳು ಎಂಬ ಲೇಖನಗಳು ಪ್ರಾದೇಶಿಕತೆಯನ್ನು ದಾಖಲಿಸಿದರೆ, ಗುಂಡಬ್ರಹ್ಮಯ್ಯಗಳ ದಾಖಲೆ, ಉದ್ದರಣೆಗಳು, ವಚನಕಾರರ ವಚನೇತರ ಸಾಹಿತ್ಯ ಮತ್ತು ಬುಕ್ಕರಾಯನ ಚರಿತ್ರೆ ಎಂಬ ಹಂಡೆ ಪಾಳೆಗಾರರ ವಂಶಾವಳಿ ಲೇಖನಗಳು ಉಪೇಕ್ಷಿತ ಸಂಗತಿಗಳನ್ನು ಹಾಗೂ ಅವರ ಸಾಂಸ್ಕೃತಿಕ ಬದುಕನ್ನು ಅನಾವರಣಗೊಳಿಸುತ್ತವೆ. ಆದೇರೀತಿ ಕರ್ನಾಟಕದ ಸಂಸ್ಕೃತಿಯನ್ನು ಎತ್ತಿಹಿಡಿಯುವಲ್ಲಿ ಶ್ರಮಿಸಿದ ಗುರುವರ್ಗ ಪೀಠ–ಮಠಗಳ ಮತ್ತು ಪಂಡಿತರ ಸಾಧನೆಗಳನ್ನು ನಾಡಿನಾದ್ಯಂತ ದೊರತ ಹಸ್ತಪ್ರತಿ ಭಂಡಾರಗಳನ್ನು ಜನಪದವನ್ನು ಆಶ್ರಯಿಸಿದ ಕೆಲವು ಲೇಖನಗಳನ್ನು ಇಲ್ಲಿ ವಿಶ್ಲೇಷಣೆಗೆ ಒಳಪಡಿಸಿರುವುದು ಲೇಖಕರ ಬಹುಶಿಸ್ತೀಯ ಅಧ್ಯಯನಕ್ಕೆ ಉದಾಹರಣೆ.

'ಚರಿತ್ರೆ–ಚಾರಿತ್ರ್ಯ' ಸಂಶೋಧನಾ ಲೇಖನ ಸಂಪುಟವಾದ ಈ ಕೃತಿಯಲ್ಲಿ 45 ಸಂಪ್ರಬಂಧಗಳಿವೆ. ಪ್ರಾಚೀನ ಅಪ್ರಕಟಿತ ಕಾವ್ಯಗಳ ಪರಿಚಯ ಹಸ್ತಪ್ರತಿ ಮತ್ತು ಗ್ರಂಥಸಂಪಾದನೆ ಕುರಿತಾದ ಲೇಖನಗಳು ವಿಜಯನಗರ ಚರಿತ್ರೆಗೆ ಸಂಬಂಧಿಸಿದ ಲೇಖನಗಳು, ಲಿಂಗಾಯಿತ ಧರ್ಮದ ಸಾಂಸ್ಕೃತಿಕ ಲೇಖನಗಳು ಒಳಗೊಂಡಿರುವ ಈ ಕೃತಿ ಶಾಸನ, ಹಸ್ತಪ್ರತಿ, ವಚನ ಮತ್ತು ಪ್ರಾಚೀನ ಕಾವ್ಯಗಳನ್ನು ಬಳಸಿಕೊಂಡು ರಚನೆಯಾದ ಸಂಶೋಧನಾ ಕೃತಿ.

'ಆಕರಗಳು: ಶೋಧ–ಪರಿಶೋಧ' ಸಂಶೋಧನಾ ಸಂಪ್ರಬಂಧಗಳ ಸಂಕಲನವಾದ ಈ ಕೃತಿಯಲ್ಲಿ ಗ್ರಂಥಸಂಪಾದನೆ, ಹಸ್ತಪ್ರತಿ, ಪ್ರಾಚೀನ ಕಾವ್ಯಗಳಿಗೆ ಸಂಬಂಧಿಸಿದ ಲೇಖನಗಳನ್ನು ಸಂಯೋಜಿಸಲಾಗಿದೆ.

"ಕನ್ನಡ ಟೀಕಾಸಾಹಿತ್ಯ" ಎಂಬ ಯೋಜನೆ ಉಪೇಕ್ಷಿತ ಕ್ಷೇತ್ರವೊಂದರ ಅಧ್ಯಯನವಾಗಿದೆ. ಒಂದು ಕಾವ್ಯದ ವಿಮರ್ಶಾತ್ಮಕ ಅಧ್ಯಯನವೆಂಬಂತೆ ಪ್ರಾಚೀನ ಕಾಲದಲ್ಲಿ ಟೀಕು, ವ್ಯಾಖ್ಯಾನ, ಭಾವಾರ್ಥಗಳನ್ನು ಬರೆಯುವ ಪರಂಪರೆಯಿರುವುದನ್ನು ಕಾಣುತ್ತೇವೆ. ಟೀಕುಗಳ ಅರ್ಥ, ಲಕ್ಷಣ, ಪ್ರಕಾರ ಹಾಗೂ ಜೈನ, ಲಿಂಗಾಯತ, ವೈದಿಕ ಟೀಕಾಕಾರರ ವಿಶ್ಲೇಷಣೆಯನ್ನು ಮಾಡಲಾಗಿದೆ.

## ಇಂದು ವಯೋ ನಿವೃತ್ತಿ

"ಹಸ್ತಪ್ರತಿಗಳು: ಕನ್ನಡಿಗರ ಬದುಕು", ಕನ್ನಡ ಶಾಸ್ತ್ರೀಯ ಭಾಷಾ ಯೋಜನೆಯಡಿಯಲ್ಲಿ ಹಸ್ತಪ್ರತಿಗಳನ್ನು ಶಾಸ್ತ್ರ, ಕಾವ್ಯಗಳು ಹಾಗೂ ಅವುಗಳ ಪಠ್ಯಕೇಂದ್ರಿತ ಭಾಗವಾಗಿ ಅಧ್ಯಯನ ಮಾಡಿರುವುದೇ ಹೆಚ್ಚು, ಕಾರಣ ಹಸ್ತಪ್ರತಿಗಳು ರಾಷ್ಟೀಯ ಸಂಪತ್ತು ಹಾಗೂ ಜನಬದುಕಿನ ಚಿತ್ರಣವನ್ನು ನೀಡುವ ಹಿನ್ನೆಲೆಯಲ್ಲಿ ಹಸ್ತಪ್ರತಿಗಳ ಪುಷ್ಟಿಕೆಗಳನ್ನಾಧರಿಸಿ ಕನ್ನಡಿಗರ ಬದುಕನ್ನು ಈ ಯೋಜನೆಯಲ್ಲಿ ನಿರೂಪಿಸಲಾಗಿದೆ.

ಹಸ್ತಪ್ರತಿಗಳಿಗೆ ಧಾರ್ಮಿಕ, ಸಾಹಿತ್ಯಕ, ಸಾಮಾಜಿಕ ಮುಖಗಳಿದ್ದಂತೆ ಚಾರಿತ್ರಿಕ ಮುಖವೂ ಅತ್ಯಂತ ಗಮನಾರ್ಹವಾಗಿರುವುದನ್ನು ಅಲ್ಲಗಳೆಯುವಂತಿಲ್ಲ. ಚರಿತ್ರೆಯ ವಿಷಯಗಳನ್ನು ನಿರೂಪಿಸಿರುವ ಹಸ್ತಪ್ರತಿಗಳ ಉಗಮ–ಬೆಳವಣಿಗೆಯೇ ಒಂದು ಚರಿತ್ರೆಯಾಗಿದೆ. ಈ ಉದ್ದೇಶದಿಂದ ಕೈಗೊಂಡ ಯೋಜನೆ 'ವಿಜಯನಗರ ಸಾಹಿತ್ಯ–ಸಂಸ್ಕೃತಿ' ಅಖಂಡ ಬಳ್ಳಾರಿ ಜಿಲ್ಲೆಯ ಪಶ್ಚಿಮ ತಾಲೂಕುಗಳಾದ ಹಡಗಲಿ, ಹರಪನಹಳ್ಳಿ, ಹಗರಿಬೊಮ್ಮನಹಳ್ಳಿ, ಕೊಟ್ಟೂರು, ಕೂಡ್ಲಿಗಿ ಹಾಗೂ ಹೊಸಪೇಟೆಯನ್ನೊಳಗೊಂಡಂತೆ "ವಿಜಯನಗರ ಜಿಲ್ಲೆ" ಅಸ್ತಿತ್ವಕ್ಕೆ ಬಂದಿದೆ. ಅಂದು ವಿಜಯನಗರ ಸಾಮ್ರಾಜ್ಯದ ಸಾಂಸ್ಕೃತಿಕ ರಾಜಧಾನಿ ಹಂಪಿಯಾಗಿತ್ತು ಧರ್ಮ, ಸಮಾಜ, ನೀರಾವರಿ, ವಾಸ್ತುಶಿಲ್ಪ, ಸಾಹಿತ್ಯ–ಸಂಸ್ಕೃತಿಗಳ ನೆಲೆವೀಡಾಗಿದ್ದ ಅಂದಿನ ವಿಜಯನಗರ ಸಾಮ್ರಾಜ್ಯ ಇಡೀ ದಕ್ಷಿಣ ಭಾರತದ ಆಡಳಿತ ಸೂತ್ರವನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡು ಮೆರೆದ ಏಕೈಕ ಸಾಮ್ರಾಜ್ಯವೆನಿಸಿತ್ತು. ಆ ಸಾಮ್ರಾಜ್ಯದ ಹೆಸರಿನಲ್ಲಿ ಅಸ್ತಿತ್ವಕ್ಕೆ ಬಂದ ನೂತನ ವಿಜಯನಗರ ಜಿಲ್ಲೆಯ ಸಾಹಿತ್ಯ–ಸಂಸ್ಕೃತಿಯನ್ನು ನಿರೂಪಿಸುವ ಸಂಶೋಧನಾತ್ಮಕ ಲೇಖನಗಳ ಸಂಕಲನವಾಗಿದೆ; 'ವಿಜಯನಗರ: ಸಾಹಿತ್ಯ–ಸಂಸ್ಕೃತಿ

"ಕನ್ನಡ ಕಾವ್ಯೋಕ್ತ ಕವಿಚರಿತೆ" ಹೆಸರಿನ ಯೋಜನೆಯಲ್ಲಿ ಒಬ್ಬ ಕವಿ ತನ್ನ ಕೃತಿಯಲ್ಲಿ ಸ್ಮರಣೆ ಮಾಡಿದ ಕವಿಗಳ ಉಲ್ಲೇಖ ಹಾಗೂ ಒಬ್ಬರ ಚರಿತ್ರೆಯನ್ನು ಮುಂದಿನ ಕವಿಗಳು ಬರೆದ ಕಾವ್ಯಗಳು ಹೀಗೆ ಕಾವ್ಯದ ಪೀಠಿಕಾ ಪ್ರಕರಣದಲ್ಲಿ ಕವಿ ಹೇಳಿಕೊಂಡ ಮಾಹಿತಿಯನ್ನು ಆಧರಿಸಿ ಕನ್ನಡ ಕಾವ್ಯೋಕ್ತ ಕವಿಚರಿತೆಯನ್ನು ಯೋಜನೆಯನ್ನು ಹಾಕಿಕೊಂಡಿದ್ದಾರೆ.

'ಹಡಪದ ಅಪ್ಪಣ್ಣ' ಬೆಂಗಳೂರಿನ ಬಸವ ಸಮಿತಿಯವರು 'ಶರಣ ಪರಂಪರೆ ಪುಸ್ತಕ ಮಾಲೆ' ಶೀರ್ಷಿಕೆಯಡಿಯಲ್ಲಿ ಪ್ರಕಟಿಸಿದ 19 ಪುಟಗಳ ಕಿರುಹೊತ್ತಿಗೆ. ಶರಣ ಸಮೂಹದಲ್ಲಿ ತುಂಬಾ ಮಹತ್ವದ ಅಷ್ಟೇ ಜವಾಬ್ದಾರಿ ಕಾರ್ಯಗಳನ್ನು ಪೂರೈಸಿದ ಅಪ್ಪಣ್ಣ ಬಸವಣ್ಣನವರ ಸಮಕಾಲೀನ, ಆತನ ಜೀವನ, ಸಾಹಿತ್ಯ ಮಂತ್ರಗೋಪ್ಯ ಮತ್ತು ಸ್ವರವಚನಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಇಲ್ಲಿ ವಿವರಿಸಲಾಗಿದೆ.

**ಸಂಪಾದಿತ ಕೃತಿಗಳು**
'ಬಳ್ಳಾರಿ ಜಿಲ್ಲಾದರ್ಶನ'ವನ್ನು ಗುಲ್ಬರ್ಗಾ ವಿಶ್ವವಿದ್ಯಾನಿಲಯಕ್ಕೆ 25 ವರ್ಷಗಳು ತುಂಬಿ ಅದು ರಜತ ಮಹೋತ್ಸವವನ್ನು ಆಚರಿಸಿಕೊಂಡ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಸೇರಿದ 5 ಜಿಲ್ಲೆಗಳ ದರ್ಶನ ಸಂಪುಟಗಳನ್ನು ಪ್ರಕಟಿಸಲಾಯಿತು. ಸಾಂಸ್ಕೃತಿಕ ಪರಂಪರೆಯನ್ನು ಕಟ್ಟಿಕೊಡುವ ಕೃತಿಯನ್ನು ಶ್ರೀಯುತರು ಸಂಪಾದಿಸಿದ್ದಾರೆ. ಜಿಲ್ಲೆಯ ಸಾಹಿತ್ಯಕ, ಶೈಕ್ಷಣಿಕ, ಆರ್ಥಿಕ ಹಾಗೂ ಪ್ರಾಕೃತಿಕ ಸಂಪತ್ತನ್ನು, ಪರಿಚಯಿಸುವ 20 ಮೌಲಿಕವಾದ ಲೇಖನಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

'ವೀರಶೈವ' ಸ್ಮರಣ ಸಂಚಿಕೆಯ ಸಂಪಾದಕರಾಗಿದ್ದಾರೆ. ಪ್ರಸ್ತುತ ಸಂಚಿಕೆಯಲ್ಲಿ 'ಕರ್ನಾಟಕ ಸಂಸ್ಕೃತಿಗೆ ಗುರು ವರ್ಗಾಚಾರ್ಯ ಕೊಡುಗೆ ಲೇಖನದಲ್ಲಿ ಕರ್ನಾಟಕವಷ್ಟೇ ಅಲ್ಲದೆ ಅದರಾಚೆಯ ಶ್ರೀ ಶೈಲಪೀಠ, ಶ್ರೀ ಕೇದಾಪೀಠ, ಶ್ರೀ ಕಾಶೀಪೀಠಗಳ ಚಿತ್ರಣವನ್ನು ದಾಖಲಿಸುವುದರ ಮೂಲಕ ಕರ್ನಾಟಕ ಸಂಸ್ಕೃತಿಗೆ ಈ ಎಲ್ಲ ಪುಣ್ಯ ಪುರುಷರ ಕೊಡುಗೆಯನ್ನು ಸಮೀಕ್ಷಾತ್ಮವಾಗಿ ಪರಿಚಯಿಸಿದ್ದಾರೆ.

"ಬಸವಯುಗದ ವಚನೇತರ ಸಾಹಿತ್ಯ" ಎಂಬ ಯೋಜನೆ ಶರಣರ ವಚನೇತರ ಸಾಹಿತ್ಯ ಮತ್ತು ಶಾಸ್ತ್ರಕೃತಿಗಳಾದ ಕಾಲಜ್ಞಾನ, ಕರಣಹಸುಗೆ, ಮಿಶ್ರಾರ್ಪಣ, ದೀಕ್ಷಾ ವಿಧಾನ, ಸ್ವರವಚನ, ಕೊರವಂಜಿಪದಗಳು, ಮಂತ್ರಗೋಪ್ಯ ಸಕೀಲಗಳು, ಸೃಷ್ಟಿವಚನಗಳನ್ನು ಮೊದಲಬಾರಿಗೆ ಶಾಸ್ತ್ರೀಯವಾಗಿ ಪರಿಷ್ಕರಿಸಿ ಒಂದೆಡೆ ಸಂಪಾದಿಸಿ ಕೊಡಲಾಗಿದೆ.

"ಗುಂಡಬ್ರಹ್ಮಯ್ಯಗಳ ಸಾಹಿತ್ಯ" ಎಂಬ ಯೋಜನೆ ಮರೆಹೊಕ್ಕವರ ಕೂಡುವುದಿಲ್ಲ ವ್ರತವನ್ನು ತೊಟ್ಟ ಧೀರ ಶರಣರ ಚರಿತ್ರೆ. ಇವರ ಚರಿತ್ರೆಯನ್ನು ನಿರೂಪಿಸುವ ಆರು ಕೃತಿಗಳನ್ನು ಒಂದೆಡೆ ಸಂಪಾದಿಸಿಕೊಡಲಾಗಿದೆ. ಕರ್ನಾಟಕಾಂಧ್ರ ಸಾಂಸ್ಕೃತಿಕ ಬಾಂಧವ್ಯದ ಪ್ರತಿನಿಧೀಕರಣದಂತೆ ಕಾಣಿಸಿಕೊಳ್ಳುವ ಗುಂಡಬ್ರಹ್ಮಯ್ಯಗಳ ಕುರಿತ ಆಚರಣೆ–ಸಂಪ್ರದಾಯಗಳು ಸಾಂಸ್ಕೃತಿಕ ಅನನ್ಯತೆಯ ದ್ಯೋತಕವೆಂಬುದನ್ನು ಈ ಯೋಜನೆ ನಿರೂಪಿಸುತ್ತದೆ.

"ಉದ್ದರಣೆ ಸಾಹಿತ್ಯ" ಎಂಬುದು ವೀರಶೈವ ತತ್ವಗಳು. ಸಿದ್ಧಾಂತಗಳನ್ನು ಚಿತ್ರ ಮತ್ತು ವಾಚ್ಯಗಳಲ್ಲಿ ವಿವರಿಸಿದ ಹಸ್ತಪ್ರತಿಗಳ ಮೂಲದಿಂದ ಶೋಧಿಸಿ–ಸಂಪಾದಿಸಿದ ಯೋಜನೆಯಾಗಿದೆ.

"ಲಿಂಗಣ್ಣ ಕವಿಯ ವರರಮ್ಯರತ್ನಾಕರ" ಮತ್ತು ಕೆಳದಿರಾಣಿ "ಕಿತ್ತೂರು ರುದ್ರಮ್ಮನ ಕಥೆ" ಕಲ್ಯಾಣ ಕರ್ನಾಟಕ ಭಾಗದ ರಾಯಚೂರು ಜಿಲ್ಲೆ ಮಾನವಿ ತಾಲೂಕಿನ ಕಲ್ಲೂರಿನ ಹಸ್ತಪ್ರತಿಗಳನ್ನಾಧರಿಸಿ ಪರಿಷ್ಕರಿಸಿದ ಯೋಜನೆಗಳಾಗಿವೆ. "ಗ್ರಾಮ ಮ್ಯಾನುಯಲ್ಸ್" ಹೆಸರಿನ ಯೋಜನೆ ಗ್ರಾಮಜೀವನದ ಶಿಷ್ಟಾಚಾರಗಳನ್ನು, ಆಡಳಿತ ಕ್ರಮವನ್ನು ಪ್ರಶೋತ್ತರ ರೂಪದಲ್ಲಿ ನಿರೂಪಿಸಿದ ದಾಖಲಾತ್ಮಕ ಕೃತಿ. ಇದನ್ನು ಹಲವು ಕೈಬರಹದ ಪ್ರತಿಗಳ ಸಹಾಯದಿಂದ ಪರಿಷ್ಕರಿಸುವ ಯೋಜನೆಯನ್ನು ಪೂರೈಸಿದ್ದಾರೆ. "ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ" ಕೃತಿಯ ಪರಿಷ್ಕರಣ ಯೋಜನೆ, ಹಸ್ತಪ್ರತಿಶಾಸ್ತ್ರ ವಿಭಾಗದ ರಜತ ಮಹೋತ್ಸವದ ಅಂಗವಾಗಿ ಕೈಗೊಂಡ "ಹಸ್ತಪ್ರತಿಶಾಸ್ತ್ರ" ಹೆಸರಿನ ಯೋಜನೆಗಳು ಡಾ. ಕೆ.ರವೀಂದ್ರನಾಥ ಅವರ ಬಹುಶಿಸ್ತೀಯ ಓದಿಗೆ ನಿದರ್ಶನಗಳಾಗಿವೆ. ಸಾಂಸ್ಥಿಕವಾಗಿ ಹಸ್ತಪ್ರತಿಗಳ ಸರ್ವೇಕ್ಷಣೆ, ಸಂಗ್ರಹ ಮತ್ತು ಸೂಚಿರಚನೆ ಯೋಜನೆಯಲ್ಲಿ ನಿರಂತರವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಒಟ್ಟಾರೆ ಈ ಮೇಲ್ಕಂಡ ಎಲ್ಲ ಕೃತಿಗಳ ಬರವಣಿಗೆಯಲ್ಲಿ ಗಟ್ಟಿತನವಿದೆ. ದೇಸಿ ನೆಲೆಯ ಹುಡುಕಾಟವಿದೆ. ಸಾಹಿತ್ಯಾಧ್ಯಯನದ ಜೊತೆ ಜೊತೆಗೆ ಇತಿಹಾಸ ಹಾಗೂ ಸಾಮಾಜಿಕ ಅಧ್ಯಯನಕ್ಕೆ ನೆರವಾಗುವ ವಿಷಯಗಳಿವೆ. ನಿರಂತರ ಓದು, ಹಸ್ತಪ್ರತಿಗಳ ಪರಿಶೀಲನೆ ಹಾಗೂ ಹಳಗನ್ನಡ ಪಾಠಬೋಧನೆಯಿಂದ ವಿದ್ವಂತ್ ಪರಂಪರೆಯ ಕೊಂಡಿಯಾಗಿದ್ದಾರೆ ಪ್ರೊ. ಕೆ. ರವೀಂದ್ರನಾಥ ಅವರು. ಕನ್ನಡ ಸಾಹಿತ್ಯ–ಸಂಸ್ಕೃತಿಗೆ ಗುರುತರವಾದ ಕೊಡುಗೆ ನೀಡಿದ ಪ್ರೊ. ಕೆ. ರವೀಂದ್ರನಾಥ ಅವರ ನಿವೃತ್ತಿ ಜೀವನ ನೆಮ್ಮದಿಯಿಂದ ಕೂಡಿರಲಿ ಮತ್ತು ಅವರಿಂದ ಸಮಾಜಕ್ಕೆ ಮತ್ತಷ್ಟು ಸೇವೆ ದೊರೆಯಲಿ ಎಂದು ಆಶಿಸುತ್ತೇವೆ.

– ಡಾ. ಎಸ್.ಆರ್. ಚನ್ನವೀರಪ್ಪ
ಪ್ರಾಧ್ಯಾಪಕರು, ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

# ಹಿಪ್ಪುನೇರಳೆ ಬೆಳೆಯ ಸಮೀಕ್ಷೆ ಮಾಡಿಸಲು ರೈತರಿಗೆ ಸಲಹೆ

**ಹಂಪಿ ಟೈಮ್ಸ್ ಕೊಪ್ಪಳ**

ಪ್ರಸ್ತುತ ಜುಲೈ ತಿಂಗಳಲ್ಲಿ "ಕ್ರಾಪ್ ಸರ್ವೆ ಖಾರೀಫ್–2024 ಆ್ಯಪ್ ನಲ್ಲಿ ಬೆಳೆ ಸಮೀಕ್ಷೆ ಆರಂಭವಾಗಿದೆ. ಆದರೆ ಜಿಲ್ಲೆಯ ರೇಷ್ಮೆ ಬೆಳೆಗಾರರಿಂದ ಈ ಸಮೀಕ್ಷೆಗೆ ನಿರೀಕ್ಷಿತ ಮಟ್ಟದಲ್ಲಿ ಸ್ಪಂದನೆ ಹಳ್ಳಿಗಳಲ್ಲಿನ ರೈತರಿಂದ ದೊರೆಯುತ್ತಿಲ್ಲ. ಆದ್ದರಿಂದ ಪ್ರಸಕ್ತ ಸಾಲಿನಲ್ಲಿ ಆರಂಭವಾಗಿರುವ ಮುಂಗಾರು ಬೆಳೆ ಸಮೀಕ್ಷೆಗಾಗಿ ರೈತರು ಮೊಬೈಲ್ ಆ್ಯಪ್ ಡೌನ್ ಲೋಡ್ ಮಾಡಿಕೊಂಡು ಇಲ್ಲವೇ ಕ್ಯೂಆರ್ ಕೋಡ್ ಸ್ಕ್ಯಾನ್ ಮೂಲಕ ತಾವು ಬೆಳೆದ ಬೆಳೆಗಳ ಸಮೀಕ್ಷೆ ಕೈಗೊಳ್ಳಬಹುದು. ಮೊಬೈಲ್ ಇಲ್ಲದಿದ್ದರೆ ಗ್ರಾಮದಲ್ಲಿರುವ ಪಿ. ಆರ್. ರನ್ನು ಭೇಟಿ ಮಾಡಿ ಬೆಳೆ ಸಮೀಕ್ಷೆ ಮಾಡುವಾಗ ಹಿಪ್ಪುನೇರಳೆಯನ್ನು ತಪ್ಪದೇ ದಾಖಲು ಮಾಡಬೇಕು.

ಸರ್ಕಾರವು ರೈತರ ಬೆಳೆಗಳ ಬಗ್ಗೆ ನಿಖರವಾದ ಮಾಹಿತಿ ಪಡೆದುಕೊಳ್ಳಲು ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಿದ್ದು, ಗ್ರಾಮಗಳಲ್ಲಿ ಆಯ್ಕೆಯಾಗಿರುವ ಪಿ.ಆರ್.ಗಳಿಂದ ಬೆಳೆ ಸಮೀಕ್ಷೆ ಕಾರ್ಯ ಕೃಷಿ ಇಲಾಖೆಯಿಂದ ಪ್ರಾರಂಭಗೊಂಡಿದೆ. ರೈತರ ಬಳಿ ಆಂಡ್ರಾಯ್ಡ್ ಮೊಬೈಲ್ ಇಲ್ಲವಾದಲ್ಲಿ ಅವರಿಗೆ ಅನುಕೂಲವಾಗಲೆಂದು ಕೃಷಿ ಇಲಾಖೆ ಪ್ರತಿ ಹಳ್ಳಿಗೆ ಪಿ.ಆರ್.ಗಳನ್ನು ನೇಮಕ ಮಾಡಿದೆ. ರೈತರ ಬೆಳೆಯ ಮಾಹಿತಿಯನ್ನು ಸಮೀಕ್ಷೆಯಲ್ಲಿ ಅಪ್‌ಲೋಡ್ ಮಾಡುವುದು ಇವರ ಕೆಲಸವಾಗಿದೆ. ಆದರೆ ಇವರನ್ನು ಸದ್ಬಳಕೆ ಮಾಡಿಕೊಳ್ಳುವ ಪ್ರಯತ್ನ ನಡೆಯುತ್ತಿಲ್ಲ.

ಬೆಳೆ ಸಮೀಕ್ಷೆಯಿಂದ ಇರುವ ಉಪಯೋಗಗಳು, ಆರ್.ಟಿ.ಸಿ.ಯಲ್ಲಿ ಬೆಳೆ ವಿವರ ದಾಖಲಿಸಲು, ರಾಷ್ಟ್ರೀಯ ಹಾಗೂ ಗ್ರಾಮೀಣ ಬ್ಯಾಂಕ್‌ಗಳಲ್ಲಿ ಬೆಳೆ ಸಾಲ ಪಡೆಯಲು, ಪ್ರಕೃತಿ ವಿಕೋಪ ಸಂದರ್ಭಗಳಲ್ಲಿ, ಬೆಳೆ ಹಾನಿ ವರದಿಯಾದ ಸಂದರ್ಭಗಳಲ್ಲಿ ಬೆಳೆ ಕಟಾವು ಪ್ರಯೋಗದಲ್ಲಿ ಬೆಳೆ ವಿಮಾ ಯೋಜನೆ ಸಂದರ್ಭಗಳಲ್ಲಿ ಇಲಾಖೆಯಿಂದ ಸಹಾಯಧನ ಸೌಲಭ್ಯ ಪಡೆ ಯಲು ಚಾಕಿ ಮತ್ತು ಗೂಡಿಗೆ ಪ್ರೋತ್ಸಾಹಧನ ಪಡೆಯಲು ಮತ್ತು ರೇಷ್ಮೆ ಹುಳು ಸಾಕುವ ಮನೆಗೆ, ಹನಿ ನೀರಾವರಿ, ನರೇಗಾ, ಉಪಕರಣ ಪಡೆಯಲು ಸಹಾಯಧನಕ್ಕೆ ಕಡ್ಡಾಯವಾಗಿ ಬೆಳೆ ಸಮೀಕ್ಷೆಯಲ್ಲಿ ಆರ್.ಟಿ.ಸಿ.ಯಲ್ಲಿ ರೇಷ್ಮೆ ಬೆಳೆ (ಹಿಪ್ಪುನೇರಳೆ) ನಮೂದಾಗಿರಬೇಕು. ರೈತರು ಇಲಾಖಾ ತಾಂತ್ರಿಕ ಸಿಬ್ಬಂದಿಗಳನ್ನು ಭೇಟಿ ಮಾಡಿ ಹೆಚ್ಚಿನ ಮಾಹಿತಿ ಪಡೆದು ಬೆಳೆ ಸಮೀಕ್ಷೆಯಲ್ಲಿ ಪಾಲ್ಗೊಳ್ಳಬೇಕು ಹಾಗೂ ತಾವು ಬೆಳೆದಿರುವ ಬೆಳೆಗಳನ್ನು ತಪ್ಪದೇ ದಾಖಲಿಸಬೇಕು ಹಾಗೂ ಪಹಣಿಯಲ್ಲಿ ರೇಷ್ಮೆ ಬೆಳೆ (ಹಿಪ್ಪುನೇರಳೆ) ನಮೂದಾಗಿದ್ದರೆ ಮಾತ್ರ ಇಲಾಖೆಯಿಂದ ದೊರೆಯುವ ಸಾಲ ಸೌಲಭ್ಯಗಳು ಸಿಗಲಿದೆ ಎಂದು ರೇಷ್ಮೆ ಉಪನಿರ್ದೇಶಕರು, ಜಿಲ್ಲಾ ಪಂಚಾಯತ್, ಕೊಪ್ಪಳ ಅವರು ತಿಳಿಸಿದ್ದಾರೆ.

# ಮೀನುಗಾಕೆ ಯೋಜನೆಗಳಡಿ ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಮೀನುಗಾರಿಕೆ ಇಲಾಖೆ ವತಿಯಿಂದ ಪ್ರಸ್ತಕ ಸಾಲಿಗೆ ವಿವಿಧ ಯೋಜನೆಗಳಡಿ ಸಹಾಯಧನ ಸೌಲಭ್ಯ ಪಡೆಯಲು ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಮೀನುಗಾರಿಕೆ ಉಪನಿರ್ದೇಶಕ ಶಿವಣ್ಣ ಅವರು ತಿಳಿಸಿದ್ದಾರೆ.

ಅರ್ಹ ಅರ್ಜಿದಾರರು ಅಗತ್ಯ ದಾಖಲೆಗಳೊಡನೆ ವೆಬ್‌ಸೈಟ್ https://ballari.nic.in ಗೆ ಭೇಟಿ ನೀಡಿ ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಬಹುದು ಅಥವಾ ಆಯಾ ತಾಲ್ಲೂಕಿನ ಮೀನುಗಾರಿಕೆ ಇಲಾಖೆ ಕಚೇರಿ ಮುಖಾಂತರ ಆನ್‌ಲೈನ್‌ನಲ್ಲಿಯೂ ಸಹ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಆ.12 ಕೊನೆಯ ದಿನವಾಗಿದೆ.

**ಯೋಜನೆಗಳ ವಿವರ:** ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ ಯೋಜನೆಯಡಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮೀನು ಕೃಷಿಕರಿಗೆ ರೂ.10 ಸಾವಿರ ವೆಚ್ಚದಲ್ಲಿ ಉಚಿತ ಮೀನುಗಾರಿಕೆ ಸಲಕರಣೆ ಕಿಟ್‌ಗಳನ್ನು ವಿತರಿಸಲಾಗುವುದು.

ಮೀನು ಮಾರುಕಟ್ಟೆಗಳ ನಿರ್ಮಾಣ ಮತ್ತು ಮೀನು ಮಾರಾಟಕ್ಕೆ ಸಹಾಯ ಮತ್ಸ್ಯವಾಹಿನಿ ಯೋಜನೆಯಡಿ ಐಸ್‌ಬಾಕ್ಸ್‌ನೊಂದಿಗೆ ಮೊಪೆಡ್ ಮತ್ತು ಸೈಕಲ್ ಖರೀದಿಸಲು ಸಹಾಯಧನ ನೀಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಬಳ್ಳಾರಿ, ಸಂಡೂರು ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಚೇರಿ ಅಥವಾ ಮೀನುಗಾರಿಕೆ ಉಪನಿರ್ದೇಶಕರ ಕಚೇರಿಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

> ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
> ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಆಷಾಡ । ಸಂವತ್ಸರ: ಕ್ರೋಧಿ

**31–07–2024 – ಬುಧವಾರ**

| | |
|---|---|
| ತಿಥಿ | : ಏಕಾದಶಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ರೋಹಿಣಿ |
| ಯೋಗ | : ಧ್ರುವ |
| ಕರಣ | : ಬಾಳವ |
| ಸೂರ್ಯೋದಯ | : 05:58:25 |
| ಸೂರ್ಯಾಸ್ತ | : 19:07:57 |
| ರಾಹು | : 12:33–14:12 |
| ಯಮಘಂಡ | : 07:37–09:16 |
| ಗುಳಿಕ | : 10:54–12:33 |

## ತುಂಗಭದ್ರಾ ನೀರಿನ ಮಟ್ಟ



ಮಂಗಳವಾರ : 30–07–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1631.72 ಅಡಿ |
| ಒಳ ಹರಿವು | 86327 ಕ್ಯುಸೆಕ್ |
| ಹೊರ ಹರಿವು | 93684 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 100.679 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1623.71 ಅಡಿ |
| ಒಳ ಹರಿವು | 69339 ಕ್ಯುಸೆಕ್ |
| ಹೊರ ಹರಿವು | 1603 ಕ್ಯುಸೆಕ್ |
| ಸಾಮರ್ಥ್ಯ | 72.357 ಟಿಎಂಸಿ |

# ಮಾನವ ಕಳ್ಳ ಸಾಗಾಣಿಕೆಯ ಕುರಿತ ಜನರಲ್ಲಿ ಅರಿವು ಮೂಡಿಸಿ

### ನ್ಯಾ.ರಾಜೇಶ್ ಎನ್.ಹೊಸಮನೆ ಹೇಳಿಕೆ । ಪ್ರತಿಜ್ಞಾ ವಿಧಿ ಕಾರ್ಯಕ್ರಮ

■ **ಹಂಪಿ ಟೈಮ್ಸ್ ಬಳ್ಳಾರಿ**



ಜಗತ್ತಿನಲ್ಲಿ ಮಾದಕ ವಸ್ತು ಸಾಗಾಣಿಕೆ, ಶಸ್ತ್ರಾಸ್ತ್ರ ಸಾಗಾಣಿಕೆ ಸೇರಿದಂತೆ ಮೂರನೇ ಅತಿದೊಡ್ಡ ದಂಧೆ ಎಂದರೆ ಮಾನವ ಕಳ್ಳ ಸಾಗಾಣಿಕೆ, ಈ ಕುರಿತು ಜನ ಸಾಮಾನ್ಯರಲ್ಲಿ ಕಾನೂನಿನ ಅರಿವು ಮೂಡಿಸುವ ಕೆಲಸವಾಗಬೇಕು ಎಂದು ಹಿರಿಯ ಸಿವಿಲ್ ನ್ಯಾಯಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯಾದ ರಾಜೇಶ್ ಎನ್.ಹೊಸಮನೆ ಅವರು ತಿಳಿಸಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇವರ ಸಂಯುಕ್ತಾಶ್ರಯದಲ್ಲಿ ನಗರದ ಜಿಲ್ಲಾ ಪಂಚಾಯತ್‌ನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ 'ಮಾನವ ಕಳ್ಳ ಸಾಗಾಣಿಕೆ ತಡೆ ದಿನಾಚರಣೆ' ಅಂಗವಾಗಿ ಮಂಗಳವಾರ ಏರ್ಪಡಿಸಲಾಗಿದ್ದ ಜಿಲ್ಲಾ ಮಟ್ಟದ ಪ್ರತಿಜ್ಞಾ ವಿಧಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಮಾಜದಲ್ಲಿನ ಅಪ್ರಾಪ್ತ ಮಕ್ಕಳು, ಮಹಿಳೆಯರು ಸೇರಿದಂತೆ ವ್ಯಕ್ತಿಗಳನ್ನು ಕಳ್ಳ ಸಾಗಾಣಿಕೆ ಮಾಡಿ ಲೈಂಗಿಕ ಶೋಷಣೆ, ಭಿಕ್ಷಾಟನೆ, ಜೀತ, ಬಾಲ ಕಾರ್ಮಿಕರ ಕೆಲಸ, ಅಂಗಾಂಗ ಕಸಿ, ಬಾಲ್ಯ ವಿವಾಹ ಮತ್ತು ವೇಶ್ಯೆವಾಟಿಕೆ ಚಟುವಟಿಕೆಗಳಲ್ಲಿ ಬಳಸಿಕೊಳ್ಳಲಾಗುತ್ತಿದ್ದು, ಸಾರ್ವಜನಿಕರಲ್ಲಿ ಕಾನೂನು ಮತ್ತು ಶಿಕ್ಷೆ ಬಗ್ಗೆ ಜಾಗೃತಿ ಮೂಡಿಸಿ ಸಂಪೂರ್ಣವಾಗಿ ನಿರ್ಮೂಲನೆಯಾಗಬೇಕು ಎಂದು ಹೇಳಿದರು.

ಜನ ಸಾಮಾನ್ಯರಲ್ಲಿ ವಿದೇಶಗಳಿಗೆ ಕರೆದೊಯ್ದು ಕೆಲಸ ಕೊಡಿಸುವ ಆಸೆ ಆಮೀಷ ಒಡ್ಡುವಂತಹ ಮಾನವ ಕಳ್ಳ ಸಾಗಾಣಿಕೆ ಪ್ರಕರಣಗಳು ಹೆಚ್ಚಾಗುತ್ತಿದ್ದು, ಈ ಕುರಿತು ಸಾರ್ವಜನಿಕರು ಎಚ್ಚರವಹಿಸಬೇಕು ಎಂದರು.

ಲೈಂಗಿಕ ಶೋಷಣೆಗಾಗಿ ಹೆಚ್ಚು ಅಪಹರಣವಾಗುವ ನಿದರ್ಶನಗಳಿದ್ದು, ಬಡತನದಿಂದ ಮುಕ್ತರಾಗಲು ಪೋಷಕರು ತಮ್ಮ ಅಪ್ರಾಪ್ತ ಮಕ್ಕಳನ್ನು ಕೆಲಸಕ್ಕೆ ಕಳುಹಿಸಿದರೆ ಅದು ಶಿಕ್ಷಾರ್ಹ ಅಪರಾಧವಾಗುತ್ತದೆ. ಸ್ವಸ್ಥ ಸಮಾಜ ನಿರ್ಮಾಣ ಮಾಡಲು ವಿವಿಧ ಇಲಾಖೆಗಳೊಡನೆ ಸಾರ್ವಜನಿಕರು ಕೈ ಜೋಡಿಸಬೇಕು ಎಂದು ತಿಳಿಸಿದರು.

ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, ಮಾನವ ಕಳ್ಳ ಸಾಗಾಣಿಕೆ ದಂಧೆಯು ಸಮಾಜದ ಕಪ್ಪು ಚುಕ್ಕೆಯಾಗಿ ಪರಿಣಮಿಸಿದ್ದು, ಮಾನವ ಕಳ್ಳ ಸಾಗಾಣಿಕೆಯು ಕಾನೂನು ಬಾಹಿರವಾಗಿದೆ ಎಂದು ಹೇಳಿದರು.

ಮಾನವ ಕಳ್ಳ ಸಾಗಾಣಿಕೆಯಿಂದ ಇಂದಿನ ಪೀಳಿಗೆ ಹಾದಿ ತಪ್ಪುತ್ತಿದೆ. ಆರ್ಥಿಕ ಸಮಸ್ಯೆಯಿಂದ ಪೋಷಕರು ಸಮಾಜದಲ್ಲಿ ಸ್ವಯಂ ಪ್ರೇರಿತರಾಗಿ ಮಾನವ ಕಳ್ಳ ಸಾಗಾಣಿಕೆಗೆ ಒತ್ತು ನೀಡುತ್ತಿದ್ದಾರೆ. ಸಾಮಾಜಿಕ ಜವಾಬ್ದಾರಿಯ ಬಗ್ಗೆ ವಿವಿಧ ಇಲಾಖೆಗಳ ಸಂಘಟನಾತ್ಮಕ ಸಹಕಾರದಿಂದ ಪೋಷಕರಲ್ಲಿ ಅರಿವು ಮೂಡಿಸುವ ಕೆಲಸವಾಗಬೇಕು ಎಂದು ತಿಳಿಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ವಿಜಯ್ ಕುಮಾರ್ ಕೆ.ಹೆಚ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಮಾನವ ಕಳ್ಳಸಾಗಾಣಿಕೆ ತಡೆಗಟ್ಟುವ ನಿಟ್ಟಿನಲ್ಲಿ ಗ್ರಾಮ ಪಂಚಾಯತ್ ಮಟ್ಟದಲ್ಲಿ "ಕಾವಲು" ಸಮಿತಿ ರಚನೆ ಮಾಡಲಾಗಿದ್ದು, ಸಮಿತಿಯಲ್ಲಿ ತಹಶೀಲ್ದಾರ್, ಗ್ರಾ.ಪಂ ಅಧ್ಯಕ್ಷ, ಗ್ರಾ.ಪಂ ಅಭಿವೃದ್ಧಿ ಅಧಿಕಾರಿ, ಗ್ರಾ.ಪಂ ಕಾರ್ಯದರ್ಶಿ, ಶಾಲಾ ಮುಖ್ಯ ಗುರುಗಳು, ಪೊಲೀಸ್ ಇಲಾಖೆಯ ಸಿಬ್ಬಂದಿ, ಅಂಗನವಾಡಿ ಆಶಾ ಕಾರ್ಯಕರ್ತೆ, ಪ್ರೌಢಶಾಲೆಯ ವಿದ್ಯಾರ್ಥಿ, ವಿದ್ಯಾರ್ಥಿನಿ ಸೇರಿದಂತೆ ಸ್ತ್ರೀ ಶಕ್ತಿ ಸಂಘದ ಮಹಿಳೆಯನ್ನು ಒಳಗೊಂಡಿರುತ್ತದೆ ಎಂದು ತಿಳಿಸಿದರು.

ಇದೇ ವೇಳೆ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಪ್ರತಿಜ್ಞಾ ವಿಧಿ ಭೋಧಿಸಿದರು.

ಈ ಸಂಧರ್ಭದಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ನವೀನ್ ಕುಮಾರ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಜಲಾಲಪ್ಪ ಎ.ಕೆ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ, ಅಂಗನವಾಡಿ ಮೇಲ್ವಿಚಾರಕರು ಮತ್ತು ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

# ವಸತಿ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಬಳ್ಳಾರಿ**

ಕುರೇಕುಪ್ಪ ಪುರಸಭೆ ವ್ಯಾಪ್ತಿಯಲ್ಲಿ ಬರುವ ವಸತಿ ರಹಿತ ತೃತೀಯ ಲಿಂಗಿ ಫಲಾನುಭವಿಗಳಿಗೆ ದೇವರಾಜ ಅರಸು ವಸತಿ ಯೋಜನೆ ಅಡಿ ವಸತಿ ಸೌಲಭ್ಯ ಒದಗಿಸಲು ಅರ್ಜಿ ಆಹ್ವಾನಿಸಲಾಗಿದೆ ಎಂದು ಕುರೇಕುಪ್ಪ ಪುರಸಭೆಯ ಮುಖ್ಯಾಧಿಕಾರಿ ತಿಳಿಸಿದ್ದಾರೆ.

**ದಾಖಲೆಗಳು:** ಅರ್ಜಿದಾರರ ಆಧಾರ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಚುನಾವಣಾ ಗುರುತಿನ ಚೀಟಿ, ಪಡಿತರ ಚೀಟಿ, ನಿವೇಶನದ ಖಾತೆಯ ನಕಲು ಪ್ರತಿ, ಬ್ಯಾಂಕ್ ಪಾಸ್ ಪುಸ್ತಕ ನಕಲು ಪ್ರತಿಯೊಂದಿಗೆ ಪಾಸ್‌ಪೋರ್ಟ್ ಅಳತೆಯ ಫೋಟೋ ಸೇರಿದಂತೆ ಇತರ ಅಗತ್ಯ ದಾಖಲೆಗಳನ್ನು ಒದಗಿಸಬೇಕು. ಹೆಚ್ಚಿನ ಮಾಹಿತಿಗಾಗಿ ಹಾಗೂ ಅರ್ಜಿ ನಮೂನೆಗಾಗಿ ಕುರೇಕುಪ್ಪ ಪುರಸಭೆ ಕಾರ್ಯಾಲಯಕ್ಕೆ ಸಂಪರ್ಕಿಸಿ.

## ಸಾರ್ವಜನಿಕ ಪ್ರಕಟಣೆ

ಇದರಲ್ಲಿ ಶ್ರೀ.ಎಸ್.ಜಿ.ಗಾಜಿ, ವಕೀಲರು–ಗದಗ, ಸಾ॥ ಚಿಕ್ಕಹಂದಿಗೋಳ. ತಾ|ಜಿ| ಗದಗ. ನಮ್ಮ ಪಕ್ಷಗಾರರಾದ ಶ್ರೀ ಪ್ರಶಾಂತ ತಂದೆ ವಾಸಪ್ಪ ಹುಲ್ಲೂರ, ವಯಾ: 35ವರ್ಷ, ಉದ್ಯೋಗ: ಸರಕಾರಿ ನೌಕರಿ, ಸಾ॥ ಅಡವಿಸೋಮಾಪೂರ ತಾ॥ ಜಿ॥ ಗದಗ ಇವರು ನೀಡಿದ ಮಾಹಿತಿ, ವ ಅಧಿಕಾರದ ಮೇಲಿಂದ ಈ ಮೂಲಕ ಕೊಡುವ ಸಾರ್ವಜನಿಕ ನೋಟಿಸು ಏನೆಂದರೆ.

ಗದಗ ಜಿಲ್ಲೆ ಗದಗ ತಾಲ್ಲೂಕ ಅಸುಂಡಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಮಲ್ಲಸಮುದ್ರ ಗ್ರಾಮದ ಬಿನ್ ಶೇತ್ಕಿ ವಾಸದ ಉದ್ದೇಶದ ಜಾಗೆಗಳು ರಿ.ಸ.ನಂ. 62/3+4+5+1ಅ/2, ಪ್ಲಾಟ ನಂ.11 ಸ್ವತ್ತಿನ ಸಂಖ್ಯೆ. 151400100300224200, ಇದರ ವಿಸ್ತೀರ್ಣ ಪೂರ್ವ–ಪಶ್ಚಿಮ: 15.00ಮೀಟರ, ಉತ್ತರ–ದಕ್ಷಿಣ: 9.00 ಮೀಟರ, ಒಟ್ಟು 135.00ಚ.ಮೀ, ಇದರ ಚಕಬಂದಿ. ಪೂರ್ವಕ್ಕೆ– 9.00ಮೀಟರ ರಸ್ತೆ, ಪಶ್ಚಿಮಕ್ಕೆ: ಪ್ಲಾಟ ನಂ.8, ಉತ್ತರಕ್ಕೆ: ಪ್ಲಾಟ ನಂ.12, ದಕ್ಷಿಣಕ್ಕೆ: ಪ್ಲಾಟ ನಂ.10, ಈ ಚಕ ಬಂದಿ ಮಧ್ಯದಲ್ಲಿರುವುದು ಈ ಆಸ್ತಿಯನ್ನು ಅದರ ಮಾಲೀಕರು,ವ ಕಬ್ಜಾದರರಾದ ಕೇಶವ ತಂದೆ ಬಲವಂತ ಕಲಾಲ ಸಾ॥ ಹೊಸಪೇಟೆ, ತಾ॥ ಜಿ॥ ವಿಜಯನಗರ ಇವರ ಆಧಾರ ಸಂಖ್ಯೆ: 573994755470, ಇವರ ಕಡೆಯಿಂದ ನಮ್ಮ ಪಕ್ಷಗಾರರು ಗದಗ ಹಿರಿಯ ಉಪನೋಂದಣಾಧಿಕಾರಿಗಳು ಗದಗ ಇವರ ಕಛೇರಿಯಲ್ಲಿ ನೋಂದ ಪೂರ್ವಕವಾಗಿ ಖರೀದಿಗೆ ಹಿಡಿಯುವವರು ಇರುತ್ತಾರೆ.

ಸದರ ಆಸ್ತಿಗೆ ಸಂಬಂಧಿಸಿದಂತೆ ಯಾರದ್ದಾದರು ಯಾವುದೇ ರೀತಿಯಾದ ಹಕ್ಕು,ವ ಹಿತ್ತಾಸಕ್ತಿ, ವ್ಯಾಜ್ಯ ವ ತಂಟೇ ತಕರಾರು ವಗೈರೇ ಇದ್ದಲ್ಲಿ ಸಂಬಂಧಿಸಿದ ಕಾಗದ ಪತ್ರಗಳೊಂದಿಗೆ ಲೇಖಿ ಮುಖಾಂತರ ಈ ಕೆಳಗೆ ಕಾಣಿಸಿದ ವಿಳಾಸಕ್ಕೆ ಈ ನೋಟೀಸು ಪ್ರಕಟವಾದ 7 ದಿನಗಳ ಒಳಗಾಗಿ ಸಲ್ಲಿಸತಕ್ಕದ್ದು. ಅವಧಿಯೊಳಗೆ ಯಾವುದೇ ತಕರಾರು ಬರದಿದ್ದ ಪಕ್ಷದಲ್ಲಿ ನಮ್ಮ ಪಕ್ಷಗಾರರು ಯಾರದು, ಯಾವುದೂ, ತಕರಾರು ಇಲ್ಲ ಅಂತಾ ಖರೀದಿ ಮಾಡುವವರು ಇರುತ್ತಾರೆ ತಿಳಿಯಿರಿ ಅಂತಾ ಕೊಟ್ಟ ಸಾರ್ವಜನಿಕ ನೋಟೀಸು.

ಸ್ಥಳ: ಗದಗ
ದಿನಾಂಕ: 30/07/2024

ಶ್ರೀ.ಎಸ್.ಜಿ.ಗಾಜಿ, ವಕೀಲರು–ಗದಗ,
ಸಾ॥ ಚಿಕ್ಕಹಂದಿಗೋಳ. ತಾ|ಜಿ|ಗದಗ
ಮೋ ನಂ. 9686845251

# ಸ್ಪರ್ಶ ಜ್ಞಾನವಿಲ್ಲದ ಮಚ್ಚೆ ಕಂಡಲ್ಲಿ ಹತ್ತಿರದ ಆಸ್ಪತ್ರೆಗೆ ಭೇಟಿ ನೀಡಿರಿ

### ಮೇಯರ್ ಮುಲ್ಲಂಗಿ ನಂದೀಶ್ ಹೇಳಿಕೆ । ಕುಷ್ಠರೋಗ ಪತ್ತೆ ಹಚ್ಚುವ ಆಂದೋಲನ ಕಾರ್ಯಕ್ರಮ

■ **ಹಂಪಿ ಟೈಮ್ಸ್ ಬಳ್ಳಾರಿ**



ದೇಹದ ಚರ್ಮದ ಮೇಲೆ ಸ್ಪರ್ಶ ಜ್ಞಾನವಿಲ್ಲದ ತಿಳಿಬಿಳಿ ತಾಮ್ರವರ್ಣದ ಮಚ್ಚೆಗಳು ಅಥವಾ ಮುಖದಲ್ಲಿ ಗಂಟುಗಳು, ಕಿವಿಯ ಮೇಲೆ ಗಂಟುಗಳು ಕಂಡುಬಂದಲ್ಲಿ ಇವು ಕುಷ್ಠ ರೋಗದ ಚಿಹ್ನೆಗಳಾಗಿರಬಹುದು. ತಪ್ಪದೇ ಹತ್ತಿರದ ಆಸ್ಪತ್ರೆಗೆ ಭೇಟಿ ನೀಡಿ ಎಂದು ಮಹಾನಗರ ಪಾಲಿಕೆಯ ಮೇಯರ್ ಮುಲ್ಲಂಗಿ ನಂದೀಶ್ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮದ ಅಡಿಯಲ್ಲಿ ದೇವಿನಗರ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯ 38ನೇ ವಾರ್ಡ್‌ನ ಕಾರ್ಕನ ಮಸೀದಿಯ ಆವರಣದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಕುಷ್ಠರೋಗ ಪ್ರಕರಣ ಪತ್ತೆ ಹಚ್ಚುವ ಆಂದೋಲನ ಚಾಲನಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಹೊಸದಾಗಿ ಕುಷ್ಠರೋಗ ಪ್ರಕರಣಗಳಿಗೆ ಉಂಟಾಗುವ ಅಂಗವಿಕಲತೆಯನ್ನು ಕಡಿಮೆ ಮಾಡಲು ಮತ್ತು ಸುಪ್ತ ಕುಷ್ಠರೋಗ ಪ್ರಕರಣಗಳನ್ನು ಅತೀ ಶೀಘ್ರವಾಗಿ ಪತ್ತೆ ಹಚ್ಚಲು ಜು.29 ರಿಂದ ಆ.14 ರ ವರೆಗೆ ಆರೋಗ್ಯ ಸಿಬ್ಬಂದಿ, ಆಶಾ ಕಾರ್ಯಕರ್ತೆಯರು, ಸ್ವಯಂಸೇವಕರು ಮನೆ ಮನೆ ಭೇಟಿ ನೀಡುವ ಮೂಲಕ ಸಮೀಕ್ಷೆ ಕಾರ್ಯ ಹಮ್ಮಿಕೊಳ್ಳಲಾಗಿದ್ದು, ಸಾರ್ವಜನಿಕರು ಇದಕ್ಕೆ ಸಹಕರಿಸಬೇಕು ಎಂದು ಕೋರಿದರು.

ಮನೆಯಲ್ಲಿರುವ 2 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರನ್ನು ತಪಾಸಣೆ ಕೈಗೊಂಡು ಶಂಕಿತ ಪ್ರಕರಣಗಳು ಕಂಡುಬಂದಲ್ಲಿ ಅವರಿಗೆ ರೆಫರಲ್ ಫಾರಂ ನೀಡಿ ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲೂಕು ಸಾರ್ವಜನಿಕ ಆಸ್ಪತ್ರೆ, ಒಂದು ವೇಳೆ ಅಗತ್ಯವೆನಿಸಿದರೆ ಜಿಲ್ಲಾ ಆಸ್ಪತ್ರೆ ಹಾಗು ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ ಆಸ್ಪತ್ರೆಯ ತಜ್ಞ ವೈದ್ಯರುಗಳ ಹತ್ತಿರ ತಪಾಸಣೆ ಮಾಡಿಸಿಕೊಳ್ಳಲು ಕಳುಹಿಸಲಾಗುವುದು.

ಜಿಲ್ಲಾ ಮಲೇರಿಯಾ ನಿಯಂತ್ರಣಾಧಿಕಾರಿ ಡಾ.ಆರ್.ಅಬ್ದುಲ್ಲಾ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್.ದಾಸಪ್ಪನವರ್, ವೈದ್ಯಾಧಿಕಾರಿ ಡಾ.ಸುಧಾರಾಣಿ, ಡಿಎಫ್ಐಟಿ ಸಂಯೋಜಕ ಸುಧಾಕರ್, ಕುಷ್ಠರೋಗ ವಿಭಾಗದ ಸುಮನ್, ಮಾನಪ್ಪ, ಎನ್.ಪಂಪಯ್ಯಸ್ವಾಮಿ, ಬಳ್ಳಾರಿ ತಾಲ್ಲೂಕು ಮೇಲ್ವಿಚಾರಕ ಮುಸ್ತಾಕ್ ಅಹಮದ್ ಸೇರಿದಂತೆ ದೇವಿನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಸಿಬ್ಬಂದಿ ಯವರು, ಆಶಾ ಕಾರ್ಯಕರ್ತೆಯರು, ಸ್ವಯಂ ಸೇವಕರು ಹಾಗೂ ಇತರೆ ಸಿಬ್ಬಂದಿ ಉಪಸ್ಥಿತರಿದ್ದರು.

Contact for Display and Classified Ads
M: 94486 33038

**IN THE COURT OF THE PRL CIVIL... JUDGE AND JMFC AT HOSAPETE**
**Cri M.C.No. 632 /2024**
Varadaneswari Ajjappa Kambi ........ Petitioner Versus
The commissioner cum Registrar Birth and death CMC of Hosapete ........Respondent
**To, Whom so ever it may concern,**

WHEREAS the above name Varadanewari Ajjappa Kambi daughter of Ajjappa basappa Kambi Hosapete Hosapete taluk filed the above petition under section 13(3) of birth and death registration Act for obtaining death certificate of her grandfather D Panchappa son of Sangappa expired on 16.08.1979 Devangapet Hosapete, Hosapete taluk Vijayanagar District.

WHEREAS, If any person/s interested with respect to the above matter is/are hereby noticed to appear in this Court in person or by a Pleader duly instructed, and able to answer all such questions, on the day of 5/9/2024 at 11.00 O clock in the noon, to answer the petition as on the day fixed, otherwise the petition will be disposed in your absence.
Given under my hand and the seal of the Court, This 30/7/ day of 2024

By order of the court
Chief Ministerial Officer
Pril.Civil Judge and JMFC Court Hosapete

**L.S. Ananda**
Advocate, Hosapete

॥ ಶ್ರೀ ಗುರು ಕೊಟ್ಟೂರೇಶ್ವರ ಪ್ರಸನ್ನ ॥

## ಶಿವಗಣಾರಾಧನೆ



ಜನನ: 13–06–1933
ಮರಣ: 27–07–2024

**ಶ್ರೀ ಅಕ್ಕಿ ಕೊಟ್ರಪ್ಪನವರು**

ವಿಜಯನಗರ ಜಿಲ್ಲಾ ಹಗರಿಬೊಮ್ಮನಹಳ್ಳಿ ತಾ, ತಂಬ್ರಹಳ್ಳಿ ಗ್ರಾಮ ನಿವಾಸಿಗಳಾದ ಶ್ರೀಮತಿ ಅಕ್ಕಿ ಕೊಟ್ರಮ್ಮ ಮತ್ತು ಮಕ್ಕಳು, ಮೊಮ್ಮಕ್ಕಳು ಮಾಡುವ ವಿಜ್ಞಾಪನೆಗಳು.

ನನ್ನ ಪೂಜ್ಯ ಪತಿದೇವರಾದ **ಶ್ರೀ ಅಕ್ಕಿ ಕೊಟ್ರಪ್ಪನವರು** ಇವರು ದಿನಾಂಕ: 27–07–2024ರ ಶನಿವಾರ ರಾತ್ರಿ 9.00 ಗಂಟೆಗೆ ಲಿಂಗೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರ ಅತ್ಮಶಾಂತಿಗಾಗಿ **ಶಿವಗಣಾರಾಧನೆಯನ್ನು 31–07–2024ನೇ ಬುಧವಾರ ಬೆಳಿಗ್ಗೆ 11.00 ಗಂಟೆಗೆ ತಂಬ್ರಹಳ್ಳಿ ಗ್ರಾಮದ ನಮ್ಮ ಸ್ವಗೃಹದಲ್ಲಿ** ನೆರವೇರಿಸಲಾಗುವುದು. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಕೋರಬೇಕಾಗಿ ವಿನಂತಿ.

–: ಇಂತಿ ದುಃಖತಪ್ತರು :–

**ಶ್ರೀಮತಿ ಅಕ್ಕಿ ಕೊಟ್ರಮ್ಮ ಮತ್ತು ಮಕ್ಕಳು, ಮೊಮ್ಮಕ್ಕಳು,**
ಕುಟುಂಬದವರು ಹಾಗೂ ಗ್ರಾಮದ ಗುರು–ಹಿರಿಯರು, ಅಪಾರ ಬಂಧುಗಳು–ಮಿತ್ರರು.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi | ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

SSLC MATHS Hampi Times Margadarshi 2024-25

### ಎರಡು ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣಗಳ ಜೋಡಿಗಳು

**ಈ ಘಟಕದದಿಂದ ನೀವು ಅತ್ಯಂತ ಸುಲಭವಾಗಿ 6 ರಿಂದ 7 ಅಂಕಗಳನ್ನು ಪಡೆಯಬಹುದಾಗಿದೆ.**

ಈ ಘಟಕದಲ್ಲಿ ನೀವು ಮುಖ್ಯವಾಗಿ ಕಲಿಯಬೇಕಾಗಿರುವುದೇನೆಂದರೆ

* ಹೇಳಿಕೆಗಳನ್ನು ಎರಡು ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣಗಳ ರೂಪದಲ್ಲಿ ಬರೆಯುವುದು.
* ಚರಾಕ್ಷರಗಳ ಸಹಗುಣಕಗಳ ಅನುದಾನಗಳನ್ನು ಹೋಲಿಸಿ ರೇಖೆಗಳ ನಕ್ಷೆಗಳ ರೂಪದಲ್ಲಿ ಪ್ರತಿನಿಧಿಸುವಿಕೆಯನ್ನು ಬರೆಯುವುದು.
* ನಕ್ಷಾ ವಿಧಾನದಿಂದ
* ಆದೇಶ ವಿಧಾನದಿಂದ ಮತ್ತು
* ವರ್ಜಿಸುವ ವಿಧಾನದಿಂದ ಪರಿಹಾರ ಕಂಡು ಹಿಡಿಯುವುದು.

ಎರಡು ಚರಾಕ್ಷರಗಳಿರುವವವ ರೇಖಾತ್ಮಕ ಸಮೀಕರಣಗಳು $ax+by+c=0$ ರೂಪದಲ್ಲಿರುತ್ತವೆ. ಇಲ್ಲಿ a ಮತ್ತು b ಗಳು ಕ್ರಮವಾಗಿ x ಮತ್ತು y ಗಳ ಸಹಗುಣಕಗಳು ಹಾಗು c ಸ್ಥಿರಾಂಕವಾಗಿದೆ. ಇನ್ನು ಎರಡು ರೇಖೆಗಳನ್ನು ಒಂದೇ ಬಾರಿಗೆ ಪರಿಗಣಿಸುವುದರಿಂದ ಅವು

$$a_1x+b_1y+c_1=0$$
$$a_2x+b_2y+c_2=0$$

**ಹೇಳಿಕೆಗಳ ಸಮೀಕರಣಗಳ ರೂಪ**

**ಉದಾ:** 4 ಪೆನ್ ಮತ್ತು 6 ಪೆನ್ಸಿಲ್ ಗಳ ಬೆಲೆ 70 ರೂಪಾಯಿಗಳು ಮತ್ತು 5 ಪೆನ್ ಮತ್ತು 2 ಪೆನ್ಸಿಲ್‌ಗಳ ಬೆಲೆ ರೂ.80 ಗಳು ಇದ್ದರೆ ಪ್ರತಿ ಪೆನ್ ಮತ್ತು ಪೆನ್ಸಿಲ್ ಗಳ ಬೆಲೆಯನ್ನು ಕಂಡುಹಿಡಿಯಿರಿ

ಪರಿಹಾರ : ಒಂದು ಪೆನ್ ಬೆಲೆ x ಆಗಿರಲಿ
ಒಂದು ಪೆನ್ಸಿಲ್ ಮೇಲೆ y ಆಗಿರಲಿ
4 ಪೆನ್ ಮತ್ತು 6 ಪೆನ್ಸಿಲ್ ಗಳ ಬೆಲೆ 70

$$4x+6y=70$$

5 ಪೆನ್ ಮತ್ತು 8 ಪೆನ್ಸಿಲ್ ಗಳ ಬೆಲೆ 80

$$5x + 6y = 80$$

**ಉದಾ:** ಮೂರು ವರ್ಷಗಳ ಹಿಂದೆ ಅನನ್ಯಾಳ ವಯಸ್ಸು ಪ್ರತಿಕ್ಷಾಳ ವಯಸ್ಸಿನ 3 ಪಟ್ಟು ಆಗಿತ್ತು ಮತ್ತು 5 ವರ್ಷಗಳ ನಂತರ ಅನನ್ಯಾಳ ವಯಸ್ಸು ಪ್ರತಿಕ್ಷಾಳ ವಯಸ್ಸಿನ ಎರಡು ಪಟ್ಟು ಆಗುತ್ತದೆ. ಹಾಗಾದರೆ ಪ್ರತೀಕ್ಷ ಮತ್ತು ಅನನ್ಯಾರ ಈಗಿನ ವಯಸ್ಸನ್ನು ಕಂಡುಹಿಡಿಯಬೇಕಿದೆ.

ಪರಿಹಾರ: ಪ್ರತಿಕ್ಷಾಳ ಈಗಿನ ವಯಸ್ಸು xಆಗಿರಲಿ
ಅನನ್ಯಾಳ ಈಗಿನ ವಯಸ್ಸು y ಆಗಿರಲಿ
ಮೂರು ವರ್ಷಗಳ ಹಿಂದೆ

$$3(x-3) = y – 3$$
$$3x – 9 = y -3$$
$$3x – y = 6 \text{ --------------(1)}$$

5 ವರ್ಷಗಳ ಹಿಂದೆ

$$2(x + 5) = y + 5$$
$$2x + 10 = y +5$$
$$2x – y =10 \text{ ------------(2)}$$

ರೇಖೆಗಳು ಮತ್ತು ಅವುಗಳ ಅನುಪಾತವನ್ನು ಆಧರಿಸಿ ಈ ಕೆಳಗಿನ ಕೋಷ್ಟಕ ಕಲಿಯಿರಿ 1 ಅಂಕ ಖಂಡಿತ ಬರುತ್ತದೆ .

| ಅನುಪಾತಗಳು | ರೇಖಾಚಿತ್ರಗಳು | ರೇಖೆಯ ವಿಧ | ಪರಿಹಾರಗಳು | ಸ್ವಭಾವ |
|---|---|---|---|---|
| $\frac{a_1}{a_2} = \frac{b_1}{b_2} = \frac{c_1}{c_2}$ | | ಐಕ್ಯಗೊಳ್ಳುವ ರೇಖೆಗಳು | ಅನಂತ (ಅಪರಿಮಿತ ಪರಿಹಾರ) | ಅವಲಂಬಿತ ಸ್ಥಿರ ಜೋಡಿಗಳು |
| $\frac{a_1}{a_2} \neq \frac{b_1}{b_2}$ | | ಛೇದಿಸುವ ರೇಖೆಗಳು | ಅನನ್ಯ (ಒಂದೇ ಒಂದು) ಪರಿಹಾರ | ಸ್ಥಿರ ಜೋಡಿಗಳು |
| $\frac{a_1}{a_2} = \frac{b_1}{b_2} \neq \frac{c_1}{c_2}$ | | ಸಮಾಂತರ ರೇಖೆಗಳು | ಯಾವುದೇ ಪರಿಹಾರವಿಲ್ಲ | ಅಸ್ಥಿರ ಜೋಡಿಗಳು |

ಮುಂದುರೆಯುವುದು.

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : **ಎಸ್.ಮಹಂತೇಶ,** ಜಿ.ಎಚ್.ಎಸ್. ಬಸರಕೋಡು, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ )

ಸಾಯಿಮಣಿ ಪ್ರಕಾಶನ, ಹೊಸಪೇಟೆ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA